ಸ್ಥಾಪನೆ 1963

ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ. 16, 1ನೇ 'ಎ' ಮುಖ್ಯ ರಸ್ತೆ, ಸುಧಾಮನಗರ, ಬೆಂಗಳೂರು – 560 027.

Tel. : 48521054 E-mail : textilecbl@gmail.com Website : www.tcbl.co.in

2024-2025ನೇ ಸಾಲಿನ
62ನೇ ಸಾಮಾನ್ಯ ಸರ್ವಸದಸ್ಯರ ವಾರ್ಷಿಕ ಸಭೆ

ದಿನಾಂಕ : 27-07-2025ನೇ ಭಾನುವಾರ ಬೆಳಿಗ್ಗೆ 10-30 ಘಂಟೆಗೆ

ಸ್ಥಳ : ಪತಿಯಪ್ಪ ಭವನದಲ್ಲಿ

ದೇವಾಂಗ ಹಾಸ್ಟಲ್ ರಸ್ತೆ (ಕಾರ್ಪೋರೇಶನ್ ಕಛೇರಿ ಹಿಂಭಾಗ), ಬೆಂಗಳೂರು – 560 027.

(31-03-2025 ಕ್ಕೆ ಬಂಡವಾಳ ಪ್ರಮಾಣ ಶೇ. 17.90%)

(CAPITAL ADEQUACY RATIO 17.90%)

<u>ಸೂಚನೆ :</u> ನಿಯಮದಂತೆ ಬ್ಯಾಂಕ್ ನೀಡಿರುವ ಗುರುತಿನ ಚೀಟಿಯನ್ನು ತಮ್ಮ ಜೊತೆಯಲ್ಲಿ ತಂದಿರುವವರಿಗೆ ಮಾತ್ರ ಮಹಾ ಸಭೆಗೆ ಪ್ರವೇಶ. ಆದ್ದರಿಂದ ಸದಸ್ಯರು ತಮ್ಮ ಹಳದಿ ಗುರುತಿನ ಚೀಟಿ (Yellow Identity Card) ಯನ್ನು ತಪ್ಪದೆ ಸಭೆಗೆ ಬರುವಾಗ ತರಬೇಕಾಗಿ ವಿನಂತಿ.

ಸದಸ್ಯರುಗಳಿಗೆ ವಿಶೇಷ ಸೂಚನೆ

ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ KYC (ನಿಮ್ಮ ಗ್ರಾಹಕರನ್ನು ಅರಿಯಿರಿ) ನಿಯಮಗಳ ಪ್ರಕಾರ ಪ್ರತಿಯೊಬ್ಬ ಸದಸ್ಯರು ಎರಡು ವರ್ಷಗಳಿಗೊಮ್ಮೆ ಮರು KYC ಮಾಡಬೇಕಾಗಿದ್ದು, ಸದಸ್ಯರು ಇತ್ತೀಚಿನ ತಮ್ಮ PAN ಹಾಗೂ AADHAR ದಾಖಲಾತಿಗಳನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಸರ್ವಸದಸ್ಯರ ಸಭೆಗೆ ಹಾಜರಾಗುವ ವೇಳೆ ಮೇಲಿನ ದಾಖಲೆ ಪ್ರತಿಗಳನ್ನು ಕಡ್ಡಾಯವಾಗಿ ನೀಡಲು ಕೋರಿದೆ.

1. ಮಾನ್ಯ ಸದಸ್ಯರುಗಳು ಬ್ಯಾಂಕಿನ ಸರ್ವ ಸದಸ್ಯರ ಸಭೆ / ಚುನಾವಣೆಯಲ್ಲಿ ಭಾಗವಹಿಸಿ ಮತ ಚಲಾಯಿಸಲು ಸರ್ಕಾರದ ನಿಯಮಗಳ ಅನ್ವಯ ಹಿಂದಿನ 5 ವಾರ್ಷಿಕ ಸರ್ವಸದಸ್ಯರ ಸಭೆಗಳ ಪೈಕಿ 2 ಸಭೆಗಳಿಗೆ ಹಾಜರಾಗುವುದು, ಬ್ಯಾಂಕಿನ ನಿಯಮಾವಳಿಯ ಅನುಸಾರ ಕನಿಷ್ಠ ಷೇರು ಮೊತ್ತ ರೂ. 1000/-ಗಳನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ.

ಹಾಗೂ

2. ಹಿಂದಿನ 5 ಸಹಕಾರ ವರ್ಷಗಳ ಪೈಕಿ ಯಾವುದಾದರು 2 ಸಹಕಾರ ವರ್ಷಗಳಿಗೆ ಈ ಕೆಳಕಂಡ ಯಾವುದಾದರೊಂದು ಬ್ಯಾಂಕಿನ ಸೇವೆ ಬಳಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಎ) ಕನಿಷ್ಠ ರೂ. 2,500/- ಮೌಲ್ಯದ ಗಡುರೇವಣಿ ಹೊಂದಿರಬೇಕು.

ಅಥವಾ

ಬಿ) ಎರಡು ವರ್ಷದ ಮಾಸಿಕ ರೂ. 100/- ರ ಆವರ್ತ ಠೇವಣಿ ಹೊಂದಿರಬೇಕು.

ಅಥವಾ

ಸಿ) ಉಳಿತಾಯ / ಚಾಲ್ತಿ ಖಾತೆಯಲ್ಲಿ ಒಂದು ವರ್ಷದಲ್ಲಿ ಕನಿಷ್ಠ 3 ವಹಿವಾಟುಗಳು ಮತ್ತು ಖಾತೆಯಲ್ಲಿ ಕನಿಷ್ಠ ರೂ. 500/- ಧನ ಶಿಲ್ಕು ನಿರ್ವಹಣೆ ಮಾಡಿರಬೇಕು.

ಅಥವಾ

ಡಿ) ನಿಯಮಗಳಿಗೆ ಒಳಪಟ್ಟು ರೂ. 5000/- ಸಾಲ ಪಡೆದಿರಬೇಕು.

ನಿಮ್ಮ ಠೇವಣಿಗಳ ಮೇಲೆ ವಾಣಿಜ್ಯ ಬ್ಯಾಂಕುಗಳು ನೀಡುವ ಬಡ್ಡಿಗಿಂತ ಹೆಚ್ಚು ಬಡ್ಡಿ ಪಡೆಯಿರಿ

ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.

2023–28ರ ಸಾಲಿನ ನೂತನ ನಿರ್ದೇಶಕ ಮಂಡಳಿ

ಶ್ರೀ ಟಿ.ಭಾಸ್ಕರ್ (ಟಿ.ಟಿ.)ರವರು
ಅಧ್ಯಕ್ಷರು

ಡಾ|| ಟಿ.ಎಸ್.ಕೃಷ್ಣಮೂರ್ತಿ (ಜರಿಕೃಷ್ಣ)ರವರು
ಉಪಾಧ್ಯಕ್ಷರು

ಶ್ರೀ ಎಣ್ಣೆಗೆರೆ ಆರ್.ವೆಂಕಟರಾಮಯ್ಯ(ವೈ.ವಿ.ರಾಜು)ರವರು
ನಿರ್ದೇಶಕರು

ಶ್ರೀ ಅನಿಲ್‌ಕುಮಾರ್ ಜೆ. ರವರು
(ಜಗನ್ನಾಥ್ ಡಿ. ಹೆಚ್. – ದೊಮ್ಮಸಂದ್ರ)
ನಿರ್ದೇಶಕರು

ಶ್ರೀ ಡಿ. ಆರ್. ಗೋಪಾಲಕೃಷ್ಣರವರು
ನಿರ್ದೇಶಕರು

ಶ್ರೀ ಎಂ. ಅನಂತಕುಮಾರ್‌ರವರು
ನಿರ್ದೇಶಕರು

ಶ್ರೀ ಆರ್.ಭಾಸ್ಕರ್ (ಗಿಣಿ)ರವರು
ನಿರ್ದೇಶಕರು

ಶ್ರೀ ದೇವರಾಜು ಪಿ. (ಆನೇಕಲ್)ರವರು
ನಿರ್ದೇಶಕರು

ಶ್ರೀ ಎಸ್. ಉಮಾಶಂಕರ್‌ರವರು
ನಿರ್ದೇಶಕರು ಹಾಗೂ
BOM ಅಧ್ಯಕ್ಷರು

ಶ್ರೀ ವಿ. ಆರ್. ವಿಶ್ವನಾಥನ್‌ರವರು
ನಿರ್ದೇಶಕರು (ಪ. ಜಾ.)

ಶ್ರೀ ಪಿ. ಎಂ. ನಾಗರಾಜುರವರು
ನಿರ್ದೇಶಕರು (ಪ. ಪಂ.)

ಶ್ರೀ ಆರ್. ಉಮಾಶಂಕರ್‌ರವರು
ನಿರ್ದೇಶಕರು (ಹಿಂ. ವ.–ಎ)

ಶ್ರೀ ಬಿ. ಜಗದೀಶ್‌ರವರು
ನಿರ್ದೇಶಕರು (ಹಿಂ. ವ.–ಬಿ)

ಶ್ರೀಮತಿ ಸುಜಾತ ಜೈಶಂಕರ್‌ರವರು
ಮಹಿಳಾ ನಿರ್ದೇಶಕರು

ಶ್ರೀಮತಿ ಹೆಚ್.ಪಾರ್ವತಿ (ರಂಗನಾಯಕಿ)ರವರು
ಮಹಿಳಾ ನಿರ್ದೇಶಕರು

ಶ್ರೀ ಜಿ. ಶಿವಕುಮಾರ್‌ರವರು
ವೃತ್ತಿಪರ ನಿರ್ದೇಶಕರು
(ಚಾರ್ಟರ್ಡ್ ಅಕೌಂಟೆಂಟ್)

ಶ್ರೀ ಎಲ್. ಕೆ. ಜಯರಾಮ್‌ರವರು
ವೃತ್ತಿಪರ ನಿರ್ದೇಶಕರು
(ಬ್ಯಾಂಕಿಂಗ್ ಪರಿಣಿತರು)

ಶ್ರೀ ಬಿ. ಶ್ರೀನಿವಾಸಮೂರ್ತಿರವರು
ಮುಖ್ಯ ಕಾರ್ಯನಿರ್ವಾಹಕರು (ಪ್ರ)

ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: ನಂ. 16, 1ನೇ "ಎ" ಮುಖ್ಯ ರಸ್ತೆ, ಸುಧಾಮನಗರ, ಬೆಂಗಳೂರು-560 027.

ಸ್ಥಾಪನೆ : 1963

2024–25ನೇ ಸಾಲಿನ 62ನೇ ಸಾಮಾನ್ಯ ಸರ್ವ ಸದಸ್ಯರ ವಾರ್ಷಿಕ ಸಭೆಯ ನೋಟೀಸು.

2024–25 ನೇ ಸಾಲಿನ 62ನೇ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ಬೆಂಗಳೂರು ದೇವಾಂಗ ಹಾಸ್ಟೆಲ್ ರಸ್ತೆಯಲ್ಲಿರುವ, ದೇವಾಂಗ ಸಂಘದ ಪತಿಯಪ್ಪ ಭವನದಲ್ಲಿ (ಬೆಂಗಳೂರು ಮಹಾನಗರ ಪಾಲಿಕೆ ಕಛೇರಿ ಹಿಂಭಾಗ), ದಿನಾಂಕ : 27.07.2025 ರಂದು ಭಾನುವಾರ ಬೆಳಿಗ್ಗೆ 10.30 ಘಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಟಿ.ಭಾಸ್ಕರ್ (ಟಿ.ಟಿ) ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ದಯಮಾಡಿಸಿ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಕಾರ್ಯಸೂಚಿ

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸಭೆಯ ನೋಟೀಸ್‌ನ್ನು ಓದಿ ರೆಕಾರ್ಡ್ ಮಾಡುವುದು. (ನಿ.ಮಂ.ವ.ಪು. 1)
4. 2023–24ನೇ ಸಾಲಿನ ಸರ್ವ ಸದಸ್ಯರ ಸಭೆಯ ಕಲಾಪಗಳನ್ನು ಓದಿ ಖಾಯಂ ಮಾಡುವುದು. (ಆ.ವ.ಪು. 2–28)
5. 2024–25ನೇ ಸಾಲಿನ ನಿರ್ದೇಶಕ ಮಂಡಳಿ ವರದಿ ಅಂಗೀಕರಿಸುವುದು. (ನಿ.ಮಂ.ವ.ಪು. 9–17)
6. 2024–25ನೇ ಸಾಲಿನ ಲೆಕ್ಕ ಪರಿಶೋಧನೆಯಾದ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅನುಮೋದನೆ ಹಾಗೂ ಲೆಕ್ಕ ಪರಿಶೋಧನಾ ವರದಿ ಮತ್ತು ವರದಿಗೆ ನಿರ್ದೇಶಕ ಮಂಡಳಿಯವರು ನೀಡಿರುವ ಸಮಾಧಾನಗಳನ್ನು ಪರಿಶೀಲಿಸಿ ಅಂಗೀಕರಿಸುವುದು. (ಆ.ವ.ಪು. 29–125)
7. 2024–25ನೇ ಸಾಲಿನಲ್ಲಿ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ. (ನಿ.ಮಂ.ವ.ಪು. 18)
8. 2024–25ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು. (ನಿ.ಮಂ.ವ.ಪು. 19)
9. 2025–26ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು. (ನಿ.ಮಂ.ವ.ಪು. 20–21)

10. ಬ್ಯಾಂಕಿನ ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ. (ನಿ.ಮಂ.ವ.ಪು. 21)
11. ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ. (ನಿ.ಮಂ.ವ.ಪು. 22)
12. ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಮಾರ್ಗಸೂಚಿಯಂತೆ 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಂಡಿರುವ ಬಗ್ಗೆ. (ನಿ.ಮಂ.ವ.ಪು. 22)
13. ನಿರ್ದೇಶಕರುಗಳಿಗೆ ಅವರ ಹತ್ತಿರದ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರೂ ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ. (ನಿ.ಮಂ.ವ.ಪು. 23)
14. ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು. (ನಿ.ಮಂ.ವ.ಪು. 23)
15. ಬ್ಯಾಂಕಿನ ಉಪನಿಯಮಗಳ ತಿದ್ದುಪಡಿ ಅನುಮೋದನೆ. (ನಿ.ಮಂ.ವ.ಪು. 24)
16. ಅಧ್ಯಕ್ಷರ ಅಪ್ಪಣೆ ಮೇರೆಗೆ ಸದಸ್ಯರಿಂದ ಬರಬಹುದಾದ ನಿರ್ಣಯಗಳು ಮತ್ತು ಸೂಚಿಸಬಹುದಾದ ವಿಷಯಗಳು.
17. ವಂದನಾರ್ಪಣೆ.

ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ

ಸಹಿ/–

ಶ್ರೀನಿವಾಸ ಮೂರ್ತಿ ಬಿ.
ಮುಖ್ಯ ಕಾರ್ಯನಿರ್ವಾಹಕರು (ಪ್ರ).

ಬೆಂಗಳೂರು
ತಾ: 20/06/2025

ಸೂಚನೆ: 1. ನಿ.ಮಂ.ವ.ಪು – ನಿರ್ದೇಶಕ ಮಂಡಳಿ ವರದಿ ಪುಟ ಸಂಖ್ಯೆ.
ಆ.ವ.ಪು – ಆಡಿಟ್ ವರದಿ ಪುಟ ಸಂಖ್ಯೆ.

2. ಕಾರ್ಯಸೂಚಿ ಅನ್ವಯ ಯಾರೇ ಸದಸ್ಯರು ಸಭೆಯಲ್ಲಿ ಚರ್ಚಿಸಲು ಇಚ್ಛಿಸಿದಲ್ಲಿ ಆ ಬಗ್ಗೆ ಲಿಖಿತ ಮೂಲಕ ನಮ್ಮ ಬ್ಯಾಂಕಿನ ಪ್ರಧಾನ ಕಛೇರಿಗೆ ಮುಂಚಿತವಾಗಿ ಅಂದರೆ 7 ದಿನಗಳೊಳಗೆ ತಿಳಿಸಿ ಅವರ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು. ಇಂತಹ ಸೂಚನೆ ನಮ್ಮ ಕಛೇರಿಗೆ ದಿನಾಂಕ : 19.07.2025ರ ಒಳಗೆ ನೀಡತಕ್ಕದ್ದು.

ಸದಸ್ಯರುಗಳಿಗೆ ವಿಶೇಷ ಸೂಚನೆ

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯಿದೆ 1959, ಅಧಿನಿಯಮ 20 (2)ರ ಪ್ರಕಾರ ಈ ಕೆಳಕಂಡ ಸದಸ್ಯರುಗಳಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ ಯಾವುದೇ ವಿಷಯಕ್ಕೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ.

1. **ಸುಸ್ತಿ ಸಾಲಗಾರ ಸದಸ್ಯರುಗಳಿಗೆ.**
2. **ಹಿಂದಿನ ಐದು ವಾರ್ಷಿಕ ಸರ್ವ ಸದಸ್ಯರ ಸಭೆಗಳಲ್ಲಿ ಕನಿಷ್ಠ 2 ಸಭೆಗಳಿಗೆ ಹಾಜರಾಗದೆ ಇರುವ ಸದಸ್ಯರುಗಳಿಗೆ.**
3. **ಹಿಂದಿನ ಐದು ವರ್ಷದಲ್ಲಿ ಕನಿಷ್ಠ 2 ವರ್ಷಗಳ ಅವಧಿಗೆ ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪಡೆಯಲು ವಿಫಲರಾದ ಸದಸ್ಯರುಗಳಿಗೆ.**
4. **ಬ್ಯಾಂಕಿನ ನಿಯಮಾವಳಿಯಲ್ಲಿ ನಿಗಧಿಪಡಿಸಿರುವ ಕನಿಷ್ಠ ಷೇರು ಮೊತ್ತ ರೂ. 1000/–ಗಳನ್ನು ಹೊಂದಿರದ ಸದಸ್ಯರುಗಳು.**

ಸದಸ್ಯರ ಗಮನಕ್ಕೆ

1. ಬೈಲಾ ನಂ.45ರ ಪ್ರಕಾರ ಬ್ಯಾಂಕಿಗೆ ಸಂಬಂಧಪಟ್ಟ ಬೇರಾವುದೇ ವಿಷಯದಲ್ಲಿ ಹೆಚ್ಚಿನ ಸಮಜಾಯಿಷಿ ಅಥವಾ ವಿವರಗಳು ಬೇಕೆಂದು ಬಯಸಿದರೆ ಸಂಬಂಧಪಟ್ಟ ಸುಸ್ತಿದಾರರಲ್ಲದ ಸದಸ್ಯರು ಕಡೇ ಪಕ್ಷ 7 ದಿನಗಳ ಮುಂಚಿತವಾಗಿ ಅಂದರೆ ದಿನಾಂಕ : 19.07.2025 ರೊಳಗಾಗಿ ದಯವಿಟ್ಟು ಬ್ಯಾಂಕಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಷೇರು ಖಾತೆಯಲ್ಲಿ ಸಹಿ ಹಾಕದಿರುವವರು ಕಡ್ಡಾಯವಾಗಿ ಸಹಿ ಹಾಕತಕ್ಕದ್ದು ಮತ್ತು ಎಲ್ಲಾ ಖಾತೆಗಳಿಗೆ ನಾಮಿನೇಷನ್ ಸೂಚನೆ ಮಾಡದೇ ಇರತಕ್ಕವರು ತಮ್ಮ ಹಿತದೃಷ್ಟಿಯಿಂದ ನಾಮಿನಿಯ ಹೆಸರನ್ನು ಸೂಚಿಸತಕ್ಕದ್ದು. ಷೇರು ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ಕಛೇರಿಗೆ ಭೇಟಿ ನೀಡಿ ತೆಗೆದುಕೊಳ್ಳುವುದು.
3. ದಿನಾಂಕ: 27.09.1991 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನವಾದಂತೆ ಆಡಿಟ್ ಆದ ಲೆಕ್ಕ ಪತ್ರಗಳ ಜಮಾ–ಖರ್ಚು ತಃಖ್ತೆ, ಆಸ್ತಿ–ಜವಾಬ್ದಾರಿ ತಃಖ್ತೆ, ಲಾಭ–ನಷ್ಟದ ತಃಖ್ತೆ, ಆಡಿಟರ್‌ರವರ ವರದಿ ಹಾಗೂ ವರದಿಗೆ ನೀಡಿರುವ ಸಮಾಧಾನಗಳ ಪ್ರತಿಯನ್ನು ಇಚ್ಛಿಸುವ ಸದಸ್ಯರು ಬ್ಯಾಂಕಿನಲ್ಲೇ ದಿನಾಂಕ: 19.07.2025 ರಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.
4. ಸಭೆಗೆ ಹಾಜರಾದ ಎಲ್ಲಾ ಸದಸ್ಯರು ತಪ್ಪದೇ ಹಾಜರಿ ಪುಸ್ತಕದಲ್ಲಿ ಸಹಿ ಹಾಕತಕ್ಕದ್ದು.
5. ಗುರುತಿನ ಚೀಟಿಯನ್ನು ಪಡೆಯದಿರುವ ಸದಸ್ಯರು ತಮ್ಮ ಭಾವಚಿತ್ರವನ್ನು ಕೂಡಲೇ ಬ್ಯಾಂಕಿಗೆ ನೀಡಿ ಪಡೆಯಬಹುದು ಹಾಗೂ ಗುರುತಿನ ಚೀಟಿ ಪಡೆದಿರುವ ಸದಸ್ಯರು ವಿಳಾಸ ಬದಲಾವಣೆಯಾಗಿದ್ದರೆ ತಕ್ಷಣ ಬ್ಯಾಂಕಿಗೆ ತಿಳಿಸುವುದು.
6. ಹಿಂದಿನ ಸಾಲುಗಳ ಡಿವಿಡೆಂಡನ್ನು ಇನ್ನೂ ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ತೆಗೆದುಕೊಳ್ಳುವುದು. ಇಲ್ಲದಿದ್ದರೆ ಈ ಮೊದಲೇ ತಿಳಿಸಿರುವಂತೆ ಬೈಲಾ ಸಂಖ್ಯೆ 103ರ ಪ್ರಕಾರ ಪಾವತಿಯಾಗದ ಡಿವಿಡೆಂಡನ್ನು ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು.
7. ಸದಸ್ಯರುಗಳು ಉಳಿತಾಯ/ಚಾಲ್ತಿ ಖಾತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಇದು ಸಂವಿಧಾನದ ತಿದ್ದುಪಡಿ ಕಾಯಿದೆ ಪ್ರಕಾರವು ಕಡ್ಡಾಯವಾಗಿರುತ್ತದೆ ಹಾಗೂ ತಮ್ಮ ಸದಸ್ಯತ್ವದ ಡಿವಿಡೆಂಡ್‌ನ್ನು ವರ್ಗಾಯಿಸಲು ಅನುಕೂಲವಾಗುವುದು.

8. ಸದಸ್ಯರುಗಳ ಹೆಸರಿನಲ್ಲಿರುವ ಗಡು ಠೇವಣಿ, ಮಂಗಳನಿಧಿ ಠೇವಣಿ ಹಾಗೂ ಆವರ್ತಕ ಠೇವಣಿ (Recurring) ಗಳಿಂದ ಕ್ರೋಢೀಕೃತವಾಗಿ ಗಳಿಸುವ ಬಡ್ಡಿ ಮೊತ್ತ ಒಂದು ವರ್ಷದಲ್ಲಿ ರೂ.50,000/– ಹಾಗೂ ಹಿರಿಯ ನಾಗರಿಕರು ರೂ.1,00,000/–ಗಳು ಅಥವಾ ಅದಕ್ಕೂ ಮೇಲ್ಪಟ್ಟು ಗಳಿಸಿದಾಗ ಕಡ್ಡಾಯವಾಗಿ ಟಿ.ಡಿ.ಎಸ್. ಕಟಾವು ಮಾಡಬೇಕಾಗಿರುತ್ತದೆ. ಇದಕ್ಕೆ ಠೇವಣಿದಾರರ ಪಾನ್ ಸಂಖ್ಯೆ ಅಗತ್ಯವಾಗಿರುತ್ತದೆ. ಪಾನ್ ಸಂಖ್ಯೆ ಇಲ್ಲದಿದ್ದ ಪಕ್ಷದಲ್ಲಿ ಶೇ.20 ರಂತೆ ಟಿ.ಡಿ.ಎಸ್. ಕಟಾವು ಮಾಡಬೇಕಾಗುತ್ತದೆಂದು ಆದಾಯ ತೆರಿಗೆ ಇಲಾಖೆಯವರು ಆದೇಶಿಸಿರುತ್ತಾರೆ.

9. ಸದಸ್ಯರು ಅವರ PAN ಸಂಖ್ಯೆಗೆ ಅವರ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಮಾನ್ಯ ಸದಸ್ಯರುಗಳು PAN ಸಂಖ್ಯೆಗೆ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಜೋಡಣೆಗೊಳಿಸುವುದು.

10. (DEAF) ಡಿಪಾಸಿಟ್ ಎಜುಕೇಷನ್ ಅವೇರ್‌ನೆಸ್ ಫಂಡ್.

ಗ್ರಾಹಕರುಗಳು ಬ್ಯಾಂಕಿನಲ್ಲಿ ಹೊಂದಿರುವ ಯಾವುದೇ ಠೇವಣಿ ಖಾತೆಗಳಲ್ಲಿ ಅಥವಾ ವಾಯಿದೆ ಮುಗಿದು 10 ವರ್ಷಗಳ ಕಾಲ ವ್ಯವಹರಿಸದ ಖಾತೆಗಳಲ್ಲಿನ ಹಣವನ್ನು ಕಡ್ಡಾಯವಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯ ಪ್ರಕಾರ ಭಾರತೀಯ ರಿಸರ್ವ್ ಬ್ಯಾಂಕಿಗೆ ಕಳುಹಿಸಬೇಕಾಗಿರುತ್ತದೆ. ಇದಕ್ಕೆ ಅವಕಾಶ ನೀಡದಂತೆ ನಿಗಾವಹಿಸಲು ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇವೆ.

11. ಭಾರತೀಯ ರಿಸರ್ವ್ ಬ್ಯಾಂಕಿನ ನಿಮ್ಮ ಗ್ರಾಹಕರನ್ನು ಅರಿಯಿರಿ ಎಂಬ ಸುತ್ತೋಲೆಯಲ್ಲಿ ತಿಳಿಸಿರುವಂತೆ ಬ್ಯಾಂಕಿನಲ್ಲಿ ಉಳಿತಾಯ/ಚಾಲ್ತಿ, ಇತರೇ ಖಾತೆಗಳನ್ನು ತೆರೆಯಲು ಇಚ್ಛಿಸುವ ಗ್ರಾಹಕರು ತಮ್ಮ ಪಾಸ್‌ಪೋರ್ಟ್/ ಪಾನ್ ಕಾರ್ಡ್/ವಾಹನ ಚಾಲನೆ ಅನುಮತಿ ಪತ್ರ/ಚುನಾವಣೆ ಆಯೋಗದ ಗುರುತಿನ ಚೀಟಿ/ಆಧಾರ್ ಕಾರ್ಡು ಇಂತಹವುಗಳನ್ನು ಅವರ ಭಾವಚಿತ್ರದೊಂದಿಗೆ ಕಡ್ಡಾಯವಾಗಿ ನೀಡಬೇಕು. ಈ ಮಾಹಿತಿಯನ್ನು ನೀಡಿ ತಮ್ಮ ಖಾತೆಯಲ್ಲಿನ ವಿವರಗಳನ್ನು ಪೂರ್ಣಗೊಳಿಸಬೇಕು.

12. ಈ ಸುತ್ತೋಲೆಯಲ್ಲಿನ ಕಾಯಿದೆಯು ಈಗಾಗಲೇ ಹೊಂದಿರುವ ಹಳೆಯ ಖಾತೆದಾರರಿಗೂ ಅನ್ವಯವಾಗುತ್ತದೆ. ಆದ್ದರಿಂದ ಮೇಲ್ಕಂಡ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಹಳೆಯ ಖಾತೆದಾರರೂ ಸಹ ಬ್ಯಾಂಕಿಗೆ ಸಲ್ಲಿಸಿ ತಮ್ಮ ಖಾತೆಗಳನ್ನು ಕ್ರಮಬದ್ದಗೊಳಿಸಬೇಕಾಗಿ ಕೋರುತ್ತೇವೆ.

13. ಉಳಿತಾಯ/ಚಾಲ್ತಿ ಖಾತೆ ಹೊಂದಿರುವ ಖಾತೆದಾರರು ತಮ್ಮ ಆಧಾರ್ ಸಂಖ್ಯೆಯನ್ನು ಖಾತೆಗಳಿಗೆ ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಜೋಡಣೆ ಮಾಡದ ಖಾತೆದಾರರು ಕೂಡಲೇ ತಮ್ಮ ಆಧಾರ್ ಸಂಖ್ಯೆಯನ್ನು ತಮ್ಮ ಖಾತೆಗಳಲ್ಲಿ ಜೋಡಣೆ ಮಾಡುವುದು.

14. ಸದಸ್ಯರುಗಳು ಬ್ಯಾಂಕಿನ ನಿಯಮಾವಳಿಯಲ್ಲಿ ನಿಗಧಿಪಡಿಸಿರುವಂತೆ ಕನಿಷ್ಠ ಷೇರು ಮೊತ್ತ ರೂ. 1000/–ಗಳನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ರೂ. 1000/–ಗಳಿಗಿಂತ ಕಡಿಮೆ ಷೇರು ಮೊತ್ತವನ್ನು ಹೊಂದಿರುವ ಸದಸ್ಯರುಗಳು ಕೂಡಲೇ ಷೇರು ಮೊತ್ತವನ್ನು ಪಾವತಿಸಿ ನಿಯಮಾವಳಿಯಲ್ಲಿ ನಿದಧಿಪಡಿಸಿರುವ ಕನಿಷ್ಠ ಷೇರುಗಳನ್ನು ಪಡೆದುಕೊಳ್ಳಲು ಕೋರಿದೆ.

ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: ನಂ. 16, 1ನೇ "ಎ" ಮುಖ್ಯ ರಸ್ತೆ, ಸುಧಾಮನಗರ, ಬೆಂಗಳೂರು-560 027.

2024-25ನೇ ಸಾಲಿನ ನಿರ್ದೇಶಕ ಮಂಡಳಿ ಸದಸ್ಯರು

1.	ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ)	ಅಧ್ಯಕ್ಷರು
2.	ಡಾ॥ ಟಿ.ಎಸ್.ಕೃಷ್ಣಮೂರ್ತಿರವರು (ಜರಿಕೃಷ್ಣ)	ಉಪಾಧ್ಯಕ್ಷರು
3.	ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ.ವಿ.ರಾಜು)	ನಿರ್ದೇಶಕರು
4.	ಶ್ರೀ. ಜೆ.ಅನಿಲ್‌ಕುಮಾರ್‌ರವರು (ಡಿ.ಹೆಚ್.ಜಗನ್ನಾಥ್-ದೊಮ್ಮಸಂದ್ರ)	ನಿರ್ದೇಶಕರು
5.	ಶ್ರೀ. ಡಿ.ಆರ್.ಗೋಪಾಲಕೃಷ್ಣರವರು	ನಿರ್ದೇಶಕರು
6.	ಶ್ರೀ. ಎಂ.ಅನಂತಕುಮಾರ್‌ರವರು	ನಿರ್ದೇಶಕರು
7.	ಶ್ರೀ. ಆರ್.ಭಾಸ್ಕರ್‌ರವರು (ಗಿಣಿ)	ನಿರ್ದೇಶಕರು
8.	ಶ್ರೀ. ಪಿ.ದೇವರಾಜುರವರು (ಆನೇಕಲ್)	ನಿರ್ದೇಶಕರು
9.	ಶ್ರೀ. ಎಸ್.ಉಮಾಶಂಕರ್‌ರವರು	ನಿರ್ದೇಶಕರು
10.	ಶ್ರೀ. ವಿ.ಆರ್.ವಿಶ್ವನಾಥನ್‌ರವರು	ನಿರ್ದೇಶಕರು (ಪ.ಜಾ)
11.	ಶ್ರೀ. ಪಿ.ಎಂ.ನಾಗರಾಜುರವರು	ನಿರ್ದೇಶಕರು (ಪ.ಪಂ)
12.	ಶ್ರೀ. ಆರ್.ಉಮಾಶಂಕರ್‌ರವರು	ನಿರ್ದೇಶಕರು (ಹಿಂ. ವರ್ಗ)
13.	ಶ್ರೀ. ಬಿ.ಜಗದೀಶ್‌ರವರು	ನಿರ್ದೇಶಕರು (ಹಿಂ. ವರ್ಗ)
14.	ಶ್ರೀಮತಿ ಸುಜಾತ ಜೈಶಂಕರ್‌ರವರು	ಮಹಿಳಾ ನಿರ್ದೇಶಕರು
15.	ಶ್ರೀಮತಿ ಹೆಚ್.ಪಾರ್ವತಿರವರು (ರಂಗನಾಯಕಿ)	ಮಹಿಳಾ ನಿರ್ದೇಶಕರು
16.	ಶ್ರೀ. ಜಿ.ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್)	ವೃತ್ತಿಪರ ನಿರ್ದೇಶಕರು
17.	ಶ್ರೀ ಎಲ್.ಕೆ.ಜಯರಾಮ್‌ರವರು (ಬ್ಯಾಂಕಿಂಗ್ ಪರಿಣಿತರು)	ವೃತ್ತಿಪರ ನಿರ್ದೇಶಕರು

2024-25ನೇ ಸಾಲಿನಲ್ಲಿ ನಡೆದ ನಿರ್ದೇಶಕ ಮಂಡಳಿಯ ಒಟ್ಟು ಸಭೆಗಳು – 14
ಹಾಜರಾತಿ ವಿವರ

1.	ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ)	–	14
2.	ಡಾ॥ ಟಿ.ಎಸ್.ಕೃಷ್ಣಮೂರ್ತಿರವರು (ಜರಿಕೃಷ್ಣ)	–	13
3.	ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ.ವಿ.ರಾಜು)	–	13
4.	ಶ್ರೀ. ಜೆ.ಅನಿಲ್‌ಕುಮಾರ್‌ರವರು (ಡಿ.ಹೆಚ್.ಜಗನ್ನಾಥ್-ದೊಮ್ಮಸಂದ್ರ)	–	13
5.	ಶ್ರೀ. ಡಿ.ಆರ್.ಗೋಪಾಲಕೃಷ್ಣರವರು	–	12
6.	ಶ್ರೀ. ಎಂ.ಅನಂತಕುಮಾರ್‌ರವರು	–	13
7.	ಶ್ರೀ. ಆರ್.ಭಾಸ್ಕರ್‌ರವರು (ಗಿಣಿ)	–	10
8.	ಶ್ರೀ. ಪಿ.ದೇವರಾಜುರವರು (ಆನೇಕಲ್)	–	14
9.	ಶ್ರೀ. ಎಸ್.ಉಮಾಶಂಕರ್‌ರವರು	–	11
10.	ಶ್ರೀ. ವಿ.ಆರ್.ವಿಶ್ವನಾಥನ್‌ರವರು	–	14
11.	ಶ್ರೀ. ಪಿ.ಎಂ.ನಾಗರಾಜುರವರು	–	10
12.	ಶ್ರೀ. ಆರ್.ಉಮಾಶಂಕರ್‌ರವರು	–	11
13.	ಶ್ರೀ. ಬಿ.ಜಗದೀಶ್‌ರವರು	–	13
14.	ಶ್ರೀಮತಿ. ಸುಜಾತ ಜೈಶಂಕರ್‌ರವರು	–	14
15.	ಶ್ರೀಮತಿ. ಹೆಚ್.ಪಾರ್ವತಿರವರು (ರಂಗನಾಯಕಿ)	–	14
16.	ಶ್ರೀ. ಜಿ.ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್)	–	07
17.	ಶ್ರೀ ಎಲ್.ಕೆ.ಜಯರಾಮ್‌ರವರು (ಬ್ಯಾಂಕಿಂಗ್ ಪರಿಣಿತರು)	–	12

ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: ನಂ. 16, 1ನೇ "ಎ" ಮುಖ್ಯ ರಸ್ತೆ, ಸುಧಾಮನಗರ, ಬೆಂಗಳೂರು-560 027.

2024–25ನೇ ಸಾಲಿನಲ್ಲಿ ನಡೆದ ಉಪಸಮಿತಿ ಸಭೆಗಳ ವಿವರ

ಸಾಲದ ಉಪಸಮಿತಿ – ಒಟ್ಟು ಸಭೆಗಳು – 10

ಹಾಜರಾತಿ ವಿವರ

1.	ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.)	–	10
2.	ಡಾ॥ ಟಿ.ಎಸ್.ಕೃಷ್ಣಮೂರ್ತಿರವರು (ಜರಿಕೃಷ್ಣ)	–	07
3.	ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ.ವಿ.ರಾಜು)	–	10
4.	ಶ್ರೀ. ಎಂ.ಅನಂತಕುಮಾರ್‌ರವರು	–	10
5.	ಶ್ರೀ. ಎಸ್.ಉಮಾಶಂಕರ್‌ರವರು	–	10
6.	ಶ್ರೀ. ಎಲ್.ಕೆ.ಜಯರಾಮ್‌ರವರು	–	10

ಸಾಲ ವಸೂಲಾತಿ ಉಪಸಮಿತಿ – ಒಟ್ಟು ಸಭೆಗಳು – 2

ಹಾಜರಾತಿ ವಿವರ

1.	ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.)	–	02
2.	ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ.ವಿ.ರಾಜು)	–	02
3.	ಶ್ರೀ. ಪಿ.ಎಂ.ನಾಗರಾಜುರವರು	–	02
4.	ಶ್ರೀ. ಆರ್.ಉಮಾಶಂಕರ್‌ರವರು	–	02
5.	ಶ್ರೀ. ಬಿ.ಜಗದೀಶ್‌ರವರು	–	02
6.	ಶ್ರೀ. ಎಲ್.ಕೆ.ಜಯರಾಮ್‌ರವರು	–	02

ಆಡಿಟ್ ಉಪಸಮಿತಿ – ಒಟ್ಟು ಸಭೆಗಳು – 12

ಹಾಜರಾತಿ ವಿವರ

1.	ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.)	–	12
2.	ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ.ವಿ.ರಾಜು)	–	11
3.	ಶ್ರೀ. ಡಿ.ಆರ್.ಗೋಪಾಲಕೃಷ್ಣರವರು	–	12
4.	ಶ್ರೀ. ಆರ್.ಉಮಾಶಂಕರ್‌ರವರು	–	12
5.	ಶ್ರೀ. ಬಿ.ಜಗದೀಶ್‌ರವರು	–	12
6.	ಶ್ರೀ. ಜಿ.ಶಿವಕುಮಾರ್‌ರವರು	–	12
7.	ಶ್ರೀ. ಎಲ್.ಕೆ.ಜಯರಾಮ್‌ರವರು	–	11

ಹೂಡಿಕೆ ಉಪಸಮಿತಿ – ಒಟ್ಟು ಸಭೆಗಳು – 12

ಹಾಜರಾತಿ ವಿವರ

1.	ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.)	–	12
2.	ಡಾ|| ಟಿ.ಎಸ್.ಕೃಷ್ಣಮೂರ್ತಿರವರು (ಜರಿಕೃಷ್ಣ)	–	10
3.	ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ.ವಿ.ರಾಜು)	–	11
4.	ಶ್ರೀ. ಡಿ.ಆರ್.ಗೋಪಾಲಕೃಷ್ಣರವರು	–	12
5.	ಶ್ರೀಮತಿ ಸುಜಾತ ಜೈಶಂಕರ್‌ರವರು	–	11
6.	ಶ್ರೀ. ಜಿ.ಶಿವಕುಮಾರ್‌ರವರು	–	12
7.	ಶ್ರೀ. ಎಲ್.ಕೆ.ಜಯರಾಮ್‌ರವರು	–	11

ಅಭಿವೃದ್ಧಿ ಉಪಸಮಿತಿ – ಒಟ್ಟು ಸಭೆಗಳು – 7

ಹಾಜರಾತಿ ವಿವರ

1.	ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.)	–	7
2.	ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ.ವಿ.ರಾಜು)	–	6
3.	ಶ್ರೀ. ಜೆ.ಅನಿಲ್‌ಕುಮಾರ್‌ರವರು (ಡಿ.ಹೆಚ್.ಜಗನ್ನಾಥ್–ದೊಮ್ಮಸಂದ್ರ)	–	6
4.	ಶ್ರೀ. ಪಿ.ದೇವರಾಜುರವರು (ಆನೇಕಲ್)	–	7
5.	ಶ್ರೀ. ಎಸ್.ಉಮಾಶಂಕರ್‌ರವರು	–	7
6.	ಶ್ರೀ. ಜಿ.ಶಿವಕುಮಾರ್‌ರವರು	–	3

ಕೋರ್ ಬ್ಯಾಂಕಿಂಗ್ ಉಪಸಮಿತಿ – ಒಟ್ಟು ಸಭೆಗಳು – 3

ಹಾಜರಾತಿ ವಿವರ

1.	ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.)	–	3
2.	ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ.ವಿ.ರಾಜು)	–	2
3.	ಶ್ರೀ. ಜೆ.ಅನಿಲ್‌ಕುಮಾರ್‌ರವರು (ಡಿ.ಹೆಚ್.ಜಗನ್ನಾಥ್–ದೊಮ್ಮಸಂದ್ರ)	–	3
4.	ಶ್ರೀ. ಪಿ.ದೇವರಾಜುರವರು (ಆನೇಕಲ್)	–	3
5.	ಶ್ರೀಮತಿ ಹೆಚ್.ಪಾರ್ವತಿರವರು (ರಂಗನಾಯಕಿ)	–	3
6.	ಶ್ರೀ. ಎಲ್.ಕೆ.ಜಯರಾಮ್‌ರವರು	–	3

ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: ನಂ. 16, 1ನೇ "ಎ" ಮುಖ್ಯ ರಸ್ತೆ, ಸುಧಾಮನಗರ, ಬೆಂಗಳೂರು-560 027.

2024-25ನೇ ಸಾಲಿನ ನಿರ್ವಹಣಾ ಮಂಡಳಿ ಸದಸ್ಯರು

1.	ಶ್ರೀ. ಎಸ್.ಉಮಾಶಂಕರ್‌ರವರು	ಅಧ್ಯಕ್ಷರು
2.	ಶ್ರೀ. ಪಿ.ಎಂ.ನಾಗರಾಜುರವರು	ನಿರ್ದೇಶಕರು / ಸದಸ್ಯರು
3.	ಶ್ರೀಮತಿ ಹೆಚ್.ಪಾರ್ವತಿರವರು (ರಂಗನಾಯಕಿ)	ಮಹಿಳಾ ನಿರ್ದೇಶಕರು / ಸದಸ್ಯರು
4.	ಶ್ರೀ. ಎಲ್.ಕೆ.ಜಯರಾಮ್‌ರವರು	ವೃತ್ತಿಪರ ನಿರ್ದೇಶಕರು / ಸದಸ್ಯರು
5.	ಶ್ರೀ. ಹೆಚ್.ವೆಂಕಟರಾಜುರವರು	ಸದಸ್ಯರು
6.	ಶ್ರೀ. ಹೆಚ್.ಹನುಮರಾಜುರವರು	ಸದಸ್ಯರು
7.	ಶ್ರೀ. ಎ.ವಿಜಯಕುಮಾರ್‌ರವರು	ಸದಸ್ಯರು
8.	ಶ್ರೀ. ಎನ್.ಉಮಾಶಂಕರ್‌ರವರು	ಸದಸ್ಯರು

2024-25ನೇ ಸಾಲಿನಲ್ಲಿ ನಡೆದ ನಿರ್ವಹಣಾ ಮಂಡಳಿಯ ಒಟ್ಟು ಸಭೆಗಳು – 11
ಹಾಜರಾತಿ ವಿವರ

1.	ಶ್ರೀ. ಎಸ್.ಉಮಾಶಂಕರ್‌ರವರು	–	11
2.	ಶ್ರೀ. ಪಿ.ಎಂ.ನಾಗರಾಜುರವರು	–	10
3.	ಶ್ರೀಮತಿ. ಹೆಚ್.ಪಾರ್ವತಿರವರು (ರಂಗನಾಯಕಿ)	–	10
4.	ಶ್ರೀ. ಎಲ್.ಕೆ.ಜಯರಾಮ್‌ರವರು	–	11
5.	ಶ್ರೀ. ಹೆಚ್.ವೆಂಕಟರಾಜುರವರು	–	08
6.	ಶ್ರೀ. ಹೆಚ್.ಹನುಮರಾಜುರವರು	–	11
7.	ಶ್ರೀ. ಎ.ವಿಜಯಕುಮಾರ್‌ರವರು	–	06
8.	ಶ್ರೀ. ಎನ್.ಉಮಾಶಂಕರ್‌ರವರು	–	10

ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: ನಂ. 16, 1ನೇ "ಎ" ಮುಖ್ಯ ರಸ್ತೆ, ಸುಧಾಮನಗರ, ಬೆಂಗಳೂರು-560 027.

2024-25ನೇ ಸಾಲಿನ ನಿರ್ದೇಶಕ ಮಂಡಳಿ ವರದಿ

ಮಾನ್ಯ ಸದಸ್ಯರೇ,

ನಮ್ಮ ಬ್ಯಾಂಕಿನ ಅರವತ್ತೆರಡನೇ ಸಾಮಾನ್ಯ ಸರ್ವ ಸದಸ್ಯರ ವಾರ್ಷಿಕ ಸಭೆಗೆ ಆಗಮಿಸಿರುವ ತಮ್ಮೆಲ್ಲರನ್ನು ಬ್ಯಾಂಕಿನ ನಿರ್ದೇಶಕ ಮಂಡಳಿಯು ಹಾರ್ದಿಕವಾಗಿ ಸ್ವಾಗತಿಸುತ್ತದೆ.

ವರದಿ ಸಾಲಿನಲ್ಲಿ ಮೃತರಾದ ಈ ಕೆಳಕಂಡ ಬ್ಯಾಂಕಿನ ಸದಸ್ಯರು ನಿಧನ ಹೊಂದಿದ್ದು, ಇವರುಗಳ ಆತ್ಮಕ್ಕೆ ಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾದ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.

ಮೃತರಾದ ಒಟ್ಟು ಸದಸ್ಯರುಗಳ ಸಂಖ್ಯೆ 131.

ಶ್ರೀ ಕುಮಾರ್ ಹೆಚ್., ಶ್ರೀ ಗಂಗಾಧರ್ ರಾವ್ ಎಸ್.ಎನ್., ಶ್ರೀ ದೇವರಾಜು ಡಿ.ಎನ್., ಶ್ರೀ ಭಾಸ್ಕರ್ ಎನ್., ಶ್ರೀ ಸುರೇಂದ್ರ ಎಸ್., ಶ್ರೀ ಶಂಕರಪ್ಪ ಜಿ.ಎಸ್., ಶ್ರೀಮತಿ ಜಾನಕಮ್ಮ, ಶ್ರೀ ಶಿವಲಿಂಗಪ್ಪ, ಶ್ರೀಮತಿ ಭಾಗ್ಯಮ್ಮ, ಶ್ರೀಮತಿ ರಂಗಮ್ಮ, ಶ್ರೀ ಪುಟ್ಟರಾಜು ಸಿ., ಶ್ರೀಮತಿ ಶಕುಂತಲ, ಶ್ರೀ ಸಿದ್ದರಾಜು ಎಸ್., ಶ್ರೀ ಗೋಪಾಲ್ ಟಿ., ಶ್ರೀಮತಿ ಶೇಷಮ್ಮ, ಶ್ರೀ ಜನಾರ್ದನ್ ಎಸ್., ಶ್ರೀ ಚಂದ್ರಶೇಖರ್ ಪಿ., ಶ್ರೀ ರಾಜಶೇಖರ್ ಎಂ., ಶ್ರೀಮತಿ ಅನಂತ ಲಕ್ಷ್ಮೀ, ಶ್ರೀಮತಿ ಶಕುಂತಲಮ್ಮ, ಶ್ರೀ ಸುಂದರ್ ವಿ., ಶ್ರೀ ವೆಂಕಟೇಶ್ ವಿ., ಶ್ರೀ ಲಕ್ಷ್ಮೀಕಾಂತ ಎಂ., ಶ್ರೀ ಅಶ್ವತ್ಥನಾರಾಯಣ ಡಿ.ಆರ್., ಶ್ರೀಮತಿ ಶಕುಂತಲ, ಶ್ರೀಮತಿ ಸಾವಿತ್ರಮ್ಮ, ಶ್ರೀ ರಮೇಶ್ ಆರ್., ಶ್ರೀ ವಿಜಯ ಕುಮಾರ್ ಆರ್., ಶ್ರೀಮತಿ ಮೀನಾಕ್ಷಿ, ಶ್ರೀಮತಿ ಉಮಾದೇವಿ ಕೆ., ಶ್ರೀ ರಾಜು, ಶ್ರೀ ಗೋಪಾಲ್ ಆರ್., ಶ್ರೀ ಸಾಕಣ್ಣ ಎನ್., ಶ್ರೀ ಮಂಜುನಾಥ ಎಸ್., ಶ್ರೀ ಲೋಕೇಶ್ ಎ., ಶ್ರೀ ರಾಜಣ್ಣ, ಶ್ರೀಮತಿ ಶೋಭಾ ಎಂ., ಶ್ರೀ ವಿಜಯ್ ಸಿ., ಶ್ರೀ ಪುಟ್ಟರಾಜು ಬಿ., ಶ್ರೀ ಗುಜರಾತಿ ಎಂ.ಎ., ಶ್ರೀ ಚಂದ್ರಕುಮಾರ್ ಹೆಚ್.ವೈ., ಶ್ರೀ ಗೋವಿಂದರಾಜು ವಿ., ಶ್ರೀಮತಿ ಹಂಸವೇಣಿ ಕೆ.ಎನ್., ಶ್ರೀ ಸೋಮಶೇಖರ್ ಆರ್., ಶ್ರೀ ರಾಜಶೇಖರ್ ಆರ್., ಶ್ರೀ ಕೃಷ್ಣಮೂರ್ತಿ ಎಸ್. ವಿ., ಶ್ರೀ ತಿಮ್ಮರಾಯಪ್ಪ ಟಿ., ಶ್ರೀಮತಿ ಪುಷ್ಪಾವತಿ ಎಂ., ಶ್ರೀ ಮಂಜುನಾಥ್ ಸಿ.ಎಸ್., ಶ್ರೀಮತಿ ದೊಡ್ಡಮ್ಮ, ಶ್ರೀ ವೆಂಕಟೇಶ್ ಎಂ., ಶ್ರೀ ಗೋಪಾಲ್ ಟಿ., ಶ್ರೀ ನಟರಾಜ್ ಕೆ.ಆರ್., ಶ್ರೀಮತಿ ಅಂಬಿಕ ಆರ್., ಶ್ರೀ ಮುನೇಶ, ಶ್ರೀ ಪುಟ್ಟರಾಜು ಬಿ., ಶ್ರೀಮತಿ ರೂಪಾ ಪಿ., ಶ್ರೀ ನಾರಾಯಣಪ್ಪ ಎಲ್., ಶ್ರೀಮತಿ ಸರೋಜಮ್ಮ, ಶ್ರೀ ನಾರಾಯಣಪ್ಪ ಕೆ., ಶ್ರೀ ಸುಬ್ರಮಣ್ಯ ಎಸ್., ಶ್ರೀ ರಾಮಮೂರ್ತಿ ಬಿ.ಎಂ., ಶ್ರೀಮತಿ ಗಾಯತ್ರಿ ಡಿ.ಎನ್., ಶ್ರೀ ಶಂಕರ್ ಆರ್.ವಿ., ಶ್ರೀ ಶ್ರೀನಿವಾಸ ಕೆ.ವೈ., ಶ್ರೀ ರಾಮನಾಥ್, ಶ್ರೀ ಆನಂದನ್ ವಿ., ಶ್ರೀ ರಾಮಾಂಜನೇಯ ಶೆಟ್ಟಿ ಕೆ.ವಿ., ಶ್ರೀ ಹನುಮಂತಪ್ಪ ಎನ್., ಶ್ರೀ ರಾಜ ಆರ್., ಶ್ರೀ ವಾಸು ಬಿ., ಶ್ರೀಮತಿ ಪಾಪಮ್ಮ, ಶ್ರೀ ಬಕ್ತಕುಮಾರ್ ಕೆ., ಶ್ರೀ ಕಾಂತರಾಜ್ ಎನ್., ಶ್ರೀ ಸತೀಶ್ ಡಿ., ಶ್ರೀ ಗೋಪಾಲಪ್ಪ, ಶ್ರೀ ನಾಗರಾಜು ಆರ್., ಶ್ರೀಮತಿ ರಾಜಲಕ್ಷ್ಮೀ ಎಂ.ಪಿ., ಶ್ರೀಮತಿ ಲಲಿತಮ್ಮ ಆರ್., ಶ್ರೀ ನಂಜುಂಡಪ್ಪ, ಶ್ರೀಮತಿ ಪಾರ್ವತಮ್ಮ, ಶ್ರೀಮತಿ ರೇಣುಕ ಕೆ., ಶ್ರೀಮತಿ ಪ್ರೇಮಮ್ಮ ಪಿ., ಶ್ರೀ ಜೀವರತ್ನಂ, ಶ್ರೀ ರಾಮು ಸಿ., ಶ್ರೀ ಜಯರಾಂ ಎ., ಶ್ರೀ ವಾಸುದೇವ ಜಿ., ಶ್ರೀಮತಿ ಗೌರಮ್ಮ, ಶ್ರೀಮತಿ ಸೌಭಾಗ್ಯ ಎಸ್., ಶ್ರೀ ಸೋಮಶೇಖರ್ ಎಂ., ಶ್ರೀಮತಿ ರಾಜೇಶ್ವರಿ ಟಿ.ಎಸ್., ಶ್ರೀ ಶ್ರೀನಿವಾಸ್ ಆರ್., ಶ್ರೀ ಶ್ರೀಧರಮೂರ್ತಿ ಟಿ.ಎಲ್., ಶ್ರೀ ಲೋಕೇಶ್ ಹೆಚ್., ಶ್ರೀಮತಿ ಲಕ್ಷ್ಮಮ್ಮ, ಶ್ರೀಮತಿ ಭಾಗ್ಯಲಕ್ಷ್ಮೀ ಜಿ., ಶ್ರೀ ಚಂದ್ರಶೇಖರ್ ಎಂ., ಶ್ರೀ ಶಿವರಾಜ್, ಶ್ರೀ ಪ್ರಕಾಶ್ ಡಿ.ಕೆ., ಶ್ರೀ ಚಂದ್ರಶೇಖರ್ ಜಿ., ಶ್ರೀ ರಮೇಶ್ ಬಿ., ಶ್ರೀಮತಿ ಶಂಕರಮ್ಮ, ಶ್ರೀ ರಾಮರತ್ನಂ ವಿ., ಶ್ರೀ ರಂಗನಾಥ ಎಸ್., ಶ್ರೀ ಲೋಕೇಶ್ ಪಿ., ಶ್ರೀಮತಿ ಬಾಲನಾಗಮ್ಮ, ಶ್ರೀಮತಿ ಸರೋಜಮ್ಮ, ಶ್ರೀ ರಾಮಚಂದ್ರ ಎನ್., ಶ್ರೀ ವಿಶ್ವಕುಮಾರ್ ಟಿ.ಪಿ., ಶ್ರೀ ಷಣ್ಮುಖ ಜಿ. ಎಸ್., ಶ್ರೀಮತಿ ಭಾಗ್ಯಲಕ್ಷ್ಮಿ, ಶ್ರೀ ರಘು ಡಿ., ಶ್ರೀ ವೇಣುಗೋಪಾಲ್ ಆರ್., ಶ್ರೀ ರಾಜಣ್ಣ ಬಿ., ಶ್ರೀ ಸೂರ್ಯನಾರಾಯಣ ಎಸ್.,

ಶ್ರೀ ಗಂಗಾಧರ ಎನ್., ಶ್ರೀ ಭೀಮಚಾರ್ ಎಲ್., ಶ್ರೀಮತಿ ಸುಶೀಲ ಎಸ್., ಶ್ರೀ ಗೋಪಾಲಕೃಷ್ಣ ಡಿ., ಶ್ರೀ ಪ್ರೇಮಕುಮಾರ್ ಎಸ್., ಶ್ರೀಮತಿ ಹೇಮಾವತಿ ಎನ್., ಶ್ರೀ ವೆಂಕಟೇಶ್ ಎಸ್., ಶ್ರೀ ರಾಜಣ್ಣ ಬಿ., ಶ್ರೀ ಮಲ್ಲಿರ್ಕಾಜುನ ಹೆಚ್., ಶ್ರೀಮತಿ ಕೋಮಲ ಜಿ., ಶ್ರೀ ಮೋಹನ್ ಕುಮಾರ್ ಜೆ.ಟಿ., ಶ್ರೀ ಜಗದೀಶ್ವರಾಚಾರ್ಯ ಎಸ್., ಶ್ರೀ ಅಲಸಿಂಗರು ಜಿ., ಶ್ರೀ ರಾಮನ್ ಆರ್., ಶ್ರೀಮತಿ ಮಹಾಲಕ್ಷ್ಮೀ, ಶ್ರೀ ಶಿವರಾಜು ಸಿ., ಇವರುಗಳ ನಿಧನಕ್ಕೆ ಗೌರವ ಸೂಚಿಸಲು ಒಂದು ನಿಮಿಷ ಮೌನವನ್ನಾಚರಿಸಿ ಮೃತರುಗಳ ಆತ್ಮಕ್ಕೆ ಶಾಂತಿಯನ್ನು ಕೋರೋಣವೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಬ್ಯಾಂಕಿನ ವಾರ್ಷಿಕ ವರದಿ 31ನೇಯ ಮಾರ್ಚ್ 2025ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದ ಪರಿಶೋಧಿಸಿದ ಆಸ್ತಿ ಹೊಣೆ ಪಟ್ಟಿ ಹಾಗೂ ಲಾಭ–ನಷ್ಟದ ತಃಖ್ತೆಯನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಸನ್ಮಾನ್ಯ ಸದಸ್ಯರ ಮುಂದಿಡಲು ಇಚ್ಛಿಸುತ್ತೇವೆ.

1. ಬ್ಯಾಂಕಿನ ವ್ಯವಹಾರಿಕ ನಿರ್ವಹಣೆ:

ನಮ್ಮ ಬ್ಯಾಂಕು 2024–25ನೇ ಸಾಲಿನಲ್ಲಿ ಠೇವಣಿ ಸಂಗ್ರಹದಲ್ಲಿ ಶೇ.3.28 ರಷ್ಟು ಹಾಗೂ ಸಾಲ ಮತ್ತು ಮುಂಗಡಗಳಲ್ಲಿ ಶೇ.4.30 ರಷ್ಟು ಪ್ರಗತಿ ಸಾಧಿಸಿದೆ. ನಮ್ಮ ಬ್ಯಾಂಕಿನ ಪ್ರಸಕ್ತ ಸಾಲಿನ ಠೇವಣಿ ಹಾಗೂ ಸಾಲ ಮತ್ತು ಮುಂಗಡಗಳ ಅನುಪಾತ ಶೇ.56.73 ರಷ್ಟಿದೆ.

2. 2024–25ನೇ ಸಾಲಿನ ವಹಿವಾಟಿನ ವಿವರ.

(ರೂ ಕೋಟಿಗಳಲ್ಲಿ)

ವಿವರ	31.03.2024	31.03.2025	ಶೇಕಡವಾರು
ಒಟ್ಟು ಠೇವಣಿ	356.66	368.37	3.28
ಸಾಲ ಮತ್ತು ಮುಂಗಡಗಳು	200.37	208.97	4.30
ಲಾಭ	4.48	3.36	–25.00
ನಿವ್ವಳ ಲಾಭ	2.12	2.61	23.11
ದುಡಿಯುವ ಬಂಡವಾಳ	409.43	419.38	2.43
ಸಿಆರ್‌ಎಆರ್	ಶೇ.17.30	ಶೇ.17.90	3.47
ಒಟ್ಟು ಆಸ್ತಿಯ ಮೇಲಿನ ಗಳಿಕೆ	ಶೇ.9.87	ಶೇ.9.37	–5.07
ಕಾಸ್ಟ್ ಆಫ್ ಫಂಡ್	ಶೇ.6.18	ಶೇ.6.45	4.37
ಒಟ್ಟು ಸಿಬ್ಬಂದಿ	87	83	–4.60

3. ಪ್ರಸಕ್ತ ವರ್ಷದ ಲಾಭ:

ನಮ್ಮ ಬ್ಯಾಂಕು 2024–25ನೇ ಸಾಲಿನಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿ ತನ್ನ ಆದಾಯವನ್ನು ವೃದ್ಧಿಸಿಕೊಂಡಿರುತ್ತದೆ. ಹಾಗೂ ವರದಿ ಸಾಲಿಗೆ ನಮ್ಮ ಬ್ಯಾಂಕು ರೂ.2.61 ಕೋಟಿಗಳ ನಿವ್ವಳ ಲಾಭವನ್ನು ದಾಖಲಿಸಿದೆ.

4. ಲಾಭಾಂಶ :

2024–25ನೇ ಸಾಲಿಗೆ ಸಂಬಂಧಿಸಿದಂತೆ ಲೆಕ್ಕ ಪತ್ರಗಳ ವಿವರಣೆಯನ್ನು ಸಾಮಾನ್ಯ ಸಭೆಗೆ ಈಗ ಮಂಡಿಸಿ ಒಪ್ಪಿಗೆಯನ್ನು ಪಡೆಯುತ್ತಿದ್ದೇವೆ. 2024–25ನೇ ಸಾಲಿನ ಒಟ್ಟಾರೆ ವಹಿವಾಟಿನ ವಿವರವನ್ನು ಮೇಲೆ ತಿಳಿಸಿರುವಂತೆ ನಿರ್ದೇಶಕ ಮಂಡಳಿಯಲ್ಲಿ ಸವಿಸ್ತಾರವಾದ ಚರ್ಚೆಯ ನಂತರ ವರದಿ ಸಾಲಿಗೆ ಉಳಿದ ಲಾಭಾಂಶದಿಂದ ನಿರ್ದೇಶಕ ಮಂಡಳಿಯು 2024–25ನೇ ಸಾಲಿಗೆ ಶೇ.12% ರಂತೆ ಲಾಭಾಂಶ ನೀಡಲು ಶಿಫಾರಸ್ಸು ಮಾಡಿರುತ್ತದೆ.

ಸಹೃದಯ ಸದಸ್ಯರು ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಈ ಪ್ರಸ್ತಾವನೆಗೆ ಅನುಮೋದನೆ ನೀಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

5. ಸದಸ್ಯತ್ವ ಮತ್ತು ಷೇರು ಬಂಡವಾಳದ ಪ್ರಗತಿಯ ನೋಟ :

2024–25ನೇ ಸಾಲಿನಲ್ಲಿ ರೂ. 6.40 ಕೋಟಿಯಷ್ಟು ಷೇರು ಬಂಡವಾಳವಿದ್ದು ನಮ್ಮ ಅಧಿಕೃತ ಬಂಡವಾಳ ಬೈಲಾ ಪ್ರಕಾರ ರೂ.20.00 ಕೋಟಿಯಷ್ಟಿದ್ದು, ಬ್ಯಾಂಕಿನ ಪ್ರಗತಿ ಮತ್ತು ವ್ಯವಹಾರದ ಬೆಳವಣಿಗೆ ಗಮನಕ್ಕೆ ತೆಗೆದುಕೊಂಡು ಅಧಿಕೃತ ಬಂಡವಾಳವನ್ನು ರೂ.20.00 ಕೋಟಿಗೆ 2012–13ನೇ ಸಾಲಿನ ಸಾಮಾನ್ಯ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ನಿಗಧಿಪಡಿಸಲಾಯಿತು. ಪ್ರಸಕ್ತ ಸಾಲಿಗೂ ಈ ನಿರ್ಣಯವನ್ನು ಜಾರಿಯಿಡಲು ತೀರ್ಮಾನಿಸಲಾಗಿ ತಮ್ಮ ಅನುಮತಿಗಾಗಿ ಮಂಡಿಸುತ್ತಿದ್ದೇವೆ.

6. ಸದಸ್ಯತ್ವ :

ವಿವರ		ವರ್ಷದ ಪ್ರಾರಂಭ ದಲ್ಲಿದ್ದ ಸದಸ್ಯರು	ವರದಿ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು	ವರದಿ ಸಾಲಿನಲ್ಲಿ ಸದಸ್ಯತ್ವ ಹಿಂದಕ್ಕೆ ಪಡೆದವರು	ವರದಿ ಸಾಲಿನ ಆಖೈರಿಗೆ ಇರುವ ಸದಸ್ಯರು	ಒಟ್ಟು
2021–2022	ಖಾಯಂ ಸದಸ್ಯರು	17496	237	207	17526	20111
	ಸಹ ಸದಸ್ಯರು	2585	72	72	2585	
2022–2023	ಖಾಯಂ ಸದಸ್ಯರು	17526	623	158	17991	20625
	ಸಹ ಸದಸ್ಯರು	2585	111	62	2634	
2023–2024	ಖಾಯಂ ಸದಸ್ಯರು	17991	643	168	18466	21176
	ಸಹ ಸದಸ್ಯರು	2634	142	66	2710	
2024–2025	ಖಾಯಂ ಸದಸ್ಯರು	18466	560	162	18864	21691
	ಸಹ ಸದಸ್ಯರು	2710	192	75	2827	

7. ಪಾವತಿಯಾದ ಷೇರು ಬಂಡವಾಳ :

(ರೂ ಲಕ್ಷಗಳಲ್ಲಿ)

ವಿವರ		ಸಾಲು ಪ್ರಾರಂಭಕ್ಕೆ	ಸಾಲಿನಲ್ಲಿ ಸೇರ್ಪಡೆ	ಸಾಲಿನಲ್ಲಿ ವಾಪಸಾತಿ	ಸಾಲಾ ಖೈರಿಗೆ ಉಳಿಕೆ	ಒಟ್ಟು ಷೇರು ಬಂಡವಾಳ
2021–2022	ಖಾಯಂ ಸದಸ್ಯರು	436.08	6.29	17.82	424.55	625.37
	ಸಹ ಸದಸ್ಯರು	216.67	0.55	16.40	200.82	
2022–2023	ಖಾಯಂ ಸದಸ್ಯರು	424.55	12.46	11.35	425.66	611.07
	ಸಹ ಸದಸ್ಯರು	200.82	0.57	15.98	185.41	
2023–2024	ಖಾಯಂ ಸದಸ್ಯರು	425.66	31.81	16.13	441.33	610.83
	ಸಹ ಸದಸ್ಯರು	185.41	1.76	17.67	169.50	
2024–2025	ಖಾಯಂ ಸದಸ್ಯರು	441.33	50.63	5.97	485.99	640.38
	ಸಹ ಸದಸ್ಯರು	169.50	1.16	16.28	154.39	

8. ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು :

ನಮ್ಮ ಬ್ಯಾಂಕಿನ ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು ವರದಿ ಸಾಲಿನ ಆರಂಭದಲ್ಲಿ ರೂ.15.52 ಕೋಟಿಗಳಿದ್ದು, ಸಾಲಾಂತ್ಯಕ್ಕೆ ರೂ.16.14 ಕೋಟಿಗಳಿಗೆ ಏರಿದ್ದು ಈ ವೃದ್ಧಿಯು ಶೇ.4.00% ರಷ್ಟಾಗಿರುತ್ತದೆ.

9. ಠೇವಣಿಗಳು ಮತ್ತು ದುಡಿಯುವ ಬಂಡವಾಳ :

ಕಳೆದ ಮೂರು ಸಾಲಿನ ಠೇವಣಿಗಳ ಮತ್ತು ದುಡಿಯುವ ಬಂಡವಾಳದ ತುಲನಾತ್ಮಕ ಅಂಕಿ ಅಂಶಗಳು ಕೆಳಕಂಡಂತಿವೆ:

(ರೂ. ಕೋಟಿಗಳಲ್ಲಿ)

ವಿವರ	31.03.2023	31.03.2024	31.03.2025
ಠೇವಣಾತಿಗಳು	344.66	356.66	368.37
ದುಡಿಯುವ ಬಂಡವಾಳ	397.59	409.43	419.38

ಬ್ಯಾಂಕು ಗ್ರಾಹಕರ ಠೇವಣಿಗಳಿಗೆ ನೀಡುವ ಬಡ್ಡಿ ದರವು ಆಕರ್ಷಕವಾಗಿದ್ದು ಎಲ್ಲಾ ವರ್ಗದ ಗ್ರಾಹಕರುಗಳಿಗೆ ಅನುಕೂಲ ಮಾಡಲಾಗಿದೆ. ಹಿರಿಯ ನಾಗರೀಕರಿಗೆ ಹಾಗೂ ನೋಂದಾಯಿತ ಸಂಘ ಸಂಸ್ಥೆಗಳು ಹೂಡಿಕೆ ಮಾಡುವ ಠೇವಣಿಗಳಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ. **ಎಲ್ಲಾ ರೀತಿಯ ಠೇವಣಿಗಳು ವಿಮೆ ಸೌಲಭ್ಯಕ್ಕೊಳಪಟ್ಟಿರುತ್ತವೆ. ಠೇವಣಿಗಳಿಗೆ ರೂ.5.00 ಲಕ್ಷದವರೆಗೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚಿತ ವಿಮಾ ಕಂಪನಿ ಡಿ.ಐ.ಸಿ.ಜಿ.ಸಿ.ಯ ಮೂಲಕ ವಿಮೆ ಭದ್ರತೆ ಮಾಡಲಾಗಿರುತ್ತದೆ.** ಸದರಿ ವಿಮೆ ಕಂತನ್ನು ಬ್ಯಾಂಕು ತನ್ನ ಸ್ವಂತ ಖರ್ಚಿನಲ್ಲಿಯೇ ಭರಿಸುತ್ತಿದೆ.

ಆದಾಯ ತೆರಿಗೆ ಇಲಾಖೆಯ ಆದೇಶದ ಪ್ರಕಾರ ಗ್ರಾಹಕರಿಗೆ ನೀಡುವ ಠೇವಣಿಗಳ ಬಡ್ಡಿಯ ಮೂಲದಲ್ಲಿಯೇ TDS ಕಟಾವು ಮಾಡಲಾಗುತ್ತಿದೆ.

10. ಸಾಲ ಮತ್ತು ಮುಂಗಡಗಳು :

ಬ್ಯಾಂಕಿನ ವತಿಯಿಂದ ಸದಸ್ಯರುಗಳಿಗೆ ವಿವಿಧ ಉದ್ದೇಶಗಳಿಗೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಸಾಕಷ್ಟು ಭದ್ರತೆಯನ್ನು ಸದಸ್ಯರುಗಳಿಂದ ಪಡೆಯಲಾಗುತ್ತಿದೆ.

ಮಗ್ಗಗಳನ್ನು/ಹುರಿಮಿಷನ್ ಯಂತ್ರಗಳನ್ನು ಬ್ಯಾಂಕಿಗೆ ಈಡು ಮಾಡಿಕೊಂಡು ಸದಸ್ಯರುಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸುಲಭ ಕಂತುಗಳಲ್ಲಿ ಪಾವತಿ ಮಾಡುವಂತೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಯಂತ್ರಗಳನ್ನಲ್ಲದೆ ಇತರೇ ಭದ್ರತೆಯನ್ನು ಪಡೆದುಕೊಳ್ಳಲಾಗುತ್ತಿದೆ.

ಸದಸ್ಯರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಶೇಕಡ 8.00 ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆ ಬ್ಯಾಂಕಿನಲ್ಲಿ ಲಭ್ಯವಿದ್ದು ಗರಿಷ್ಠ ಮೊತ್ತ ರೂ.10.00 ಲಕ್ಷದವರೆಗೂ ಸಾಲ ಪಡೆಯಬಹುದು.

11. ನೇಕಾರಿಕೆಯ ಸಾಲ :

ಶೇ.0, ಶೇ.1 ಹಾಗೂ ಶೇ.3 ರ ಬಡ್ಡಿದರದಲ್ಲಿ ಬ್ಯಾಂಕಿನಿಂದ ನೀಡಲಾದ ಸಾಲಗಳಿಗೆ ವರದಿ ಸಾಲಿನಲ್ಲಿ ಸರ್ಕಾರದಿಂದ **ರೂ.72.27** ಲಕ್ಷ ಬಡ್ಡಿ ಸಹಾಯ ಧನವು ಬ್ಯಾಂಕಿಗೆ ಬರಬೇಕಾಗಿದ್ದು, ಆ ಪೈಕಿ **ರೂ.56.80** ಲಕ್ಷ ಪ್ರಸಕ್ತ ಸಾಲಿನಲ್ಲಿ ಬಂದಿದ್ದು, ಬಾಕಿ **ರೂ.15.47** ಲಕ್ಷಗಳು ಬರಬೇಕಾಗಿದ್ದು ಅದನ್ನು ವಾಪಸ್ಸು ಪಡೆಯಲು ಅಗತ್ಯ ಕ್ರಮವಿಡಲಾಗಿದೆ. ಸರ್ಕಾರದ ಆದೇಶದ ನಂತರ ಶೇ.0, ಶೇ.1 ಹಾಗೂ ಶೇ.3ರ ಬಡ್ಡಿದರದ ನೇಕಾರಿಕೆ ಸಾಲ ನೀಡಿಕೆಯನ್ನು ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರೆಸಲಾಗಿರುತ್ತದೆ. ಸದರಿ ಸೌಲಭ್ಯವನ್ನು ರೇಷ್ಮೆ ಹುರಿ ಮಾಡುವವರಿಗೆ ಮತ್ತು ರೇಷ್ಮೆ ಬಣ್ಣ ಮಾಡುವಂತಹ ಸದಸ್ಯರುಗಳಿಗೂ ಸಹ ವಿಸ್ತರಿಸಲಾಗಿರುತ್ತದೆ. ಸದರಿ ಸಾಲಗಳಿಗೆ ಬ್ಯಾಂಕಿನಿಂದ ವಿಧಿಸುವ ಸೇವಾ ಶುಲ್ಕವನ್ನು ಶೇ.50 ರಷ್ಟು ಕಡಿಮೆಗೊಳಿಸಿರುತ್ತದೆ.

12. ಕರ್ನಾಟಕ ಸರ್ಕಾರ ಜವಳಿ ಇಲಾಖೆಯವರು ನೇಕಾರಿಕೆಗೆ ನೀಡುವ ಸಹಾಯಧನ (Subsidy) :

ನೇಕಾರರ ವಿವಿಧ ಸಂಘಗಳ ಪ್ರಯತ್ನದ ಫಲವಾಗಿ ಕರ್ನಾಟಕ ಸರ್ಕಾರವು ಸಣ್ಣ ಮತ್ತು ಗುಡಿ ನೇಕಾರಿಕೋದ್ಯಮದ ಪ್ರಗತಿಗಾಗಿ ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ನೇಕಾರರಿಗೆ ಎರಡು ಮಗ್ಗಗಳ ಘಟಕ ಸ್ಥಾಪಿಸಲು ಪ್ರೋತ್ಸಾಹ ನೀಡುವ ದಿಸೆಯಲ್ಲಿ ಸರ್ಕಾರವು ಒಂದು ಮಗ್ಗಕ್ಕೆ ಬೇಕಾಗುವ ವೆಚ್ಚವನ್ನು ಉಚಿತವಾಗಿ ಭರಿಸಿ ಮತ್ತೊಂದು ಮಗ್ಗಕ್ಕೆ ಸಹಕಾರಿ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆ, ಅದೇ ರೀತಿ ಗಣಕೀಕೃತ ಜಾಕಾರ್ಡ್ ಖರೀದಿಸಲು ಶೇ.50ರಷ್ಟು ಮೊತ್ತ ಸಹಾಯಧನ ನೀಡಿ ಉಳಿದ ಶೇ.50ರಷ್ಟು ಮೊತ್ತವನ್ನು ಸಹಕಾರ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆಗಳಡಿಯಲ್ಲಿ ಸಾಲ ನೀಡಲು ಕ್ರಮವಿಡಲಾಗಿದೆ. 2024–25ನೇ ಸಾಲಿನಲ್ಲಿ ಸರ್ಕಾರದ ಬಡ್ಡಿ ರಿಯಾಯಿತಿ ಯೋಜನೆಯಲ್ಲಿ ಶೂನ್ಯ ಬಡ್ಡಿ ದರದಲ್ಲಿ 23 ಸದಸ್ಯರಿಗೆ ರೂ.38.40 ಲಕ್ಷಗಳು ಮತ್ತು ಶೇ.3ರ ಬಡ್ಡಿ ದರದಲ್ಲಿ 24 ಸದಸ್ಯರಿಗೆ ರೂ.101.95 ಲಕ್ಷಗಳ ಒಟ್ಟು 47 ಸದಸ್ಯರಿಗೆ ರೂ.140.35 ಲಕ್ಷಗಳ ನೇಕಾರಿಕೆ ಸಾಲಗಳನ್ನು ಮಂಜೂರು ಮಾಡಲಾಗಿದೆ. ಇದಕ್ಕಾಗಿ ಈ ಯೋಜನೆಯಡಿ ವಿದ್ಯುತ್ ಮಗ್ಗಗಳನಲ್ಲದೆ ಇತರೇ ಭದ್ರತೆಯನ್ನು ಸಹ ಪಡೆಯಲಾಗಿದೆ.

13. ಇ. ಎಂ. ಐ. ಬಡ್ಡಿದರದ ಸಾಲ ಯೋಜನೆ :

ಸಾಲದ ವಿಧ	ಬಡ್ಡಿ ದರ	ಸಾಲದ ಅವಧಿ
ಸ್ಥಿರಾಸ್ತಿ ಅಡಮಾನ ಸಾಲ – ಯಂತ್ರೋಪಕರಣ ಸಾಲ / ಇತರೇ ಉದ್ದೇಶಗಳಿಗೆ	ಶೇ.11.50	60/120/180 ತಿಂಗಳುಗಳು
ಗೃಹಸಾಲ	ಶೇ.10.50	60/120/180/240ತಿಂಗಳುಗಳು
ಗೃಹಸಾಲ ಮಹಿಳೆಯರಿಗೆ	ಶೇ.10.35	60/120/180/240ತಿಂಗಳುಗಳು
ವಾಹನ ಸಾಲ ದ್ವಿಚಕ್ರ	ಶೇ.11.70	36 ತಿಂಗಳುಗಳು
ವಾಹನ ಸಾಲ ನಾಲ್ಕು ಚಕ್ರ	ಶೇ.11.50	60 ತಿಂಗಳುಗಳು

14. ಎನ್.ಇ.ಎಫ್.ಟಿ. / ಆರ್.ಟಿ.ಜಿ.ಎಸ್. / ಎಟಿಎಂ ಸೌಲಭ್ಯ :

ಎನ್.ಇ.ಎಫ್.ಟಿ./ಆರ್.ಟಿ.ಜಿ.ಎಸ್. ಮೂಲಕ ತಾವು ಇಚ್ಛಿಸುವಂತಹ ಇತರೇ ಬ್ಯಾಂಕುಗಳ ಖಾತೆದಾರರಿಗೆ ತಮ್ಮ ಹಣವನ್ನು ಕೂಡಲೇ ವರ್ಗಾಯಿಸುವ ಸೌಲಭ್ಯ ಹಾಗೂ ಇತರೇ ಬ್ಯಾಂಕುಗಳಿಂದ ಖಾತೆದಾರರು ತಮ್ಮ ಖಾತೆಗಳಿಗೆ ಹಣವನ್ನು ಜಮಾ ಪಡೆಯುವ ನೇರ ಸೌಲಭ್ಯವನ್ನು (HOST TO HOST SYSTEM) ಒದಗಿಸಲಾಗಿದೆ. ಈ ಸೌಲಭ್ಯಕ್ಕಾಗಿ IFSC ಕೋಡ್ ಸಂಖ್ಯೆಯನ್ನು ಎಲ್ಲಾ ಶಾಖೆಗಳಿಗೂ ಪ್ರತ್ಯೇಕವಾಗಿ ಪಡೆದುಕೊಳ್ಳಲಾಗಿರುತ್ತದೆ ಹಾಗೂ ಹೆಚ್.ಡಿ.ಎಫ್.ಸಿ. ಬ್ಯಾಂಕಿನ ಸಹಯೋಗದೊಂದಿಗೆ Rupay Debit Card ಸೌಲಭ್ಯವನ್ನು ಉಳಿತಾಯ / ಚಾಲ್ತಿ ಖಾತೆದಾರರುಗಳಿಗೆ ಒದಗಿಸಲಾಗುತ್ತಿದ್ದು, ಮಾನ್ಯ ಸದಸ್ಯರು / ಖಾತೆದಾರರುಗಳು ಸದರಿ ಸೇವೆಯನ್ನು ಉಪಯೋಗಿಸಿಕೊಳ್ಳಲು ಈ ಮೂಲಕ ಕೋರಿದೆ.

15. ಮೊಬೈಲ್ ಬ್ಯಾಂಕಿಂಗ್ (Immediate Payment System) ಸೌಲಭ್ಯ:

ಭಾರತೀಯ ರಿಸರ್ವ್ ಬ್ಯಾಂಕು ಸದಸ್ಯರು/ಗ್ರಾಹಕರುಗಳಿಗೆ ಮೊಬೈಲ್ ಬ್ಯಾಂಕಿಂಗ್ ಸೇವೆ ಒದಗಿಸಲು ಪರವಾನಗಿ ನೀಡಿದ್ದು, ಅದರಂತೆ ಸದಸ್ಯರು/ಗ್ರಾಹಕರುಗಳಿಗೆ ಮೊಬೈಲ್ ಬ್ಯಾಂಕಿಂಗ್ (IMPS) ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಇದರಿಂದ ಗ್ರಾಹಕರು ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಅಥವಾ ಬೇರೆ ಬ್ಯಾಂಕಿನ ಬೇರೆಯವರ ಖಾತೆಗಳಿಗೆ ಮೊಬೈಲ್ ಮುಖಾಂತರ ತ್ವರಿತವಾಗಿ ಹಣ ವರ್ಗಾವಣೆ ಮಾಡಬಹುದಾಗಿರುತ್ತದೆ. ಮಾನ್ಯ ಸದಸ್ಯರು/ಗ್ರಾಹಕರು ಸದರಿ ಸೇವೆಯನ್ನು ಉಪಯೋಗಿಸಿಕೊಳ್ಳಲು ಈ ಮೂಲಕ ಕೋರಿದೆ.

16. ಯುಪಿಐ ಪಾವತಿ ಸೌಲಭ್ಯ:

ಬ್ಯಾಂಕಿನ ಗ್ರಾಹಕರುಗಳಿಗೆ ಯುಪಿಐ ಸೇವೆ ನೀಡಲು ಬ್ಯಾಂಕು ಕ್ರಮವಿಟ್ಟಿದ್ದು, ಇದರಿಂದ ಗ್ರಾಹಕರು ತಾವು ಖರೀದಿಸುವ ವಸ್ತುಗಳಿಗೆ ಕ್ಯೂಆರ್ ಕೋಡ್ ಮೂಲಕ ತ್ವರಿತವಾಗಿ ಹಣ ಪಾವತಿಸಲು ಅನುಕೂಲವಾಗುವುದು. ಮುಂದಿನ ದಿನಗಳಲ್ಲಿ ಗ್ರಾಹಕರು/ಸದಸ್ಯರುಗಳು ಇದರ ಸೇವೆ ಪಡೆಯಲು ಕೋರಿದೆ.

17. ಟೆಕ್ನಿಕಲ್ ರೈಟ್ ಆಫ್ ನಿಯಮಾವಳಿ ಅಳವಡಿಸಿಕೊಂಡಿರುವ ಬಗ್ಗೆ:

2023–24 ನೇ ಸಾಲಿನ 61ನೇ ಸರ್ವಸದಸ್ಯರ ಸಭೆಯಲ್ಲಿ ಟೆಕ್ನಿಕಲ್ ರೈಟ್ ಆಫ್ ನಿಯಮಾವಳಿ ಅಳವಡಿಸಿಕೊಂಡು ದೀರ್ಘಕಾಲದಿಂದ ವಸೂಲಾಗದ ಆಧಾರ ರಹಿತ ಮುಳುಗುವ ಆಸ್ತಿಗಳೆಂದು ಗುರುತಿಸಲ್ಪಟ್ಟ ಸಾಲದ ಖಾತೆಗಳನ್ನು ಟೆಕ್ನಿಕಲ್ ರೈಟ್ ಆಫ್ ಪ್ರಕ್ರಿಯೆಗೆ ಒಳಪಡಿಸಲು ಸಲಹೆ ನೀಡಿದುದರ ಮೇರೆಗೆ, ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಟೆಕ್ನಿಕಲ್ ರೈಟ್ ಆಫ್ ನಿಯಮಾವಳಿ ರಚಿಸಿಕೊಂಡು, ನಿರ್ದೇಶಕ ಮಂಡಳಿ ಅನುಮೋದನೆ ಪಡೆದು ಅಂತಹ ಸಾಲದ ಖಾತೆಗಳನ್ನು ಟೆಕ್ನಿಕಲ್ ರೈಟ್ ಆಫ್ ಪ್ರಕ್ರಿಯೆಗೆ ಒಳಪಡಿಸಲಾಗಿರುತ್ತದೆ. ಸಾಲದ ಖಾತೆಗಳನ್ನು ಟೆಕ್ನಿಕಲ್ ರೈಟ್ ಆಫ್ ಪ್ರಕ್ರಿಯೆಗೆ ಒಳಪಡಿಸಿದ್ದರೂ ಸಹ ಅವುಗಳ ವಸೂಲಾತಿಗೆ ಕ್ರಮವಿಡಲಾಗಿದೆ.

18. ಅನುತ್ಪಾದಕ ಸಾಲಗಳು :

ನಿರ್ದೇಶಕ ಮಂಡಳಿಯು ಅನುತ್ಪಾದಕ ಸಾಲದ ವಸೂಲಾತಿಗಾಗಿ ಕ್ರಮವಿಟ್ಟಿದ್ದು ಹಾಗೂ ಅದರ ಪ್ರಮಾಣವನ್ನು ಕಡಿಮೆಗೊಳಿಸಲು ವಸೂಲಾತಿಯ ಕ್ರಮವನ್ನು ಬಲಪಡಿಸಲು ಸೂಕ್ತ ಕ್ರಮ ಕೈಗೊಂಡಿದೆ. ಬ್ಯಾಂಕಿನ ಅನುತ್ಪಾದಕ ಸಾಲದ ವಿವರ ಇಂತಿದೆ.

(ರೂ ಲಕ್ಷಗಳಲ್ಲಿ)

ವಿವರ	2023	2024	2025
ಅನುತ್ಪಾದಕ ಆಸ್ತಿಯ ಮೊತ್ತ	791.16	720.92	648.11
ನಿವ್ವಳ ಅನುತ್ಪಾದಕ ಆಸ್ತಿಯ ಮೊತ್ತ	0	0	0
ಶೇಕಡವಾರು ಅನುತ್ಪಾದಕ ಆಸ್ತಿಯ ಪ್ರಮಾಣ	4.11	3.60	3.10
ಶೇಕಡವಾರು ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ	0	0	0

19. ಬ್ಯಾಂಕಿನ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಬಗ್ಗೆ :

ಬ್ಯಾಂಕಿನ ಸಿಬ್ಬಂದಿಗಳನ್ನು ಆರೋಗ್ಯ ವಿಮೆ ಯೋಜನೆಯಲ್ಲಿ ರಿಲಯನ್ಸ್ ಜನರಲ್ ಇನ್‌ಶ್ಯೂರೆನ್ಸ್ ಪಾಲಿಸಿಗೊಳಪಡಿಸಿದ್ದು ವರದಿ ಸಾಲಿನಲ್ಲೂ ಸಿಬ್ಬಂದಿಗಳಿಗೆ ಕ್ಷೇಮದ ಸೌಲಭ್ಯ ಒದಗಿಸಿದೆ.

20. ಸದಸ್ಯರ ಮರಣ ಪರಿಹಾರ ನಿಧಿ :

ಬ್ಯಾಂಕಿನ ಸಾಮಾನ್ಯ ಸದಸ್ಯರುಗಳು ಮರಣ ಹೊಂದಿದಾಗ ಅವರ ವಾರಸುದಾರ ಸದಸ್ಯರಿಗೆ ರೂ.10,000/–ಗಳ ಮರಣ ಪರಿಹಾರ ಸಹಾಯಧನ ನೀಡುವ ಪದ್ಧತಿ ಜಾರಿಯಲ್ಲಿರುತ್ತದೆ.

21. ಟೆಕ್ಸ್‌ಟೈಲ್ ಸಹಕಾರಿ ವಿದ್ಯಾರ್ಥಿ ಮಿತ್ರ (ಬುಕ್ ಬ್ಯಾಂಕ್):

ಬ್ಯಾಂಕಿನಿಂದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೇಕಾಗಿರುವ ಪಠ್ಯ ಪುಸ್ತಕಗಳನ್ನು ಎರವಲು ಸೇವೆಯ ಅಡಿಯಲ್ಲಿ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ 105 ಸದಸ್ಯರ ಮಕ್ಕಳು ನಮ್ಮ ಬುಕ್ ಬ್ಯಾಂಕಿನಿಂದ ಪಠ್ಯ ಪುಸ್ತಕಗಳನ್ನು ಪಡೆದಿರುತ್ತಾರೆ. ಈ ರೀತಿ ಪಡೆದಂತಹ ಪಠ್ಯ ಪುಸ್ತಕಗಳನ್ನು ಪರೀಕ್ಷೆ ಮುಗಿದ ನಂತರ ಕೂಡಲೇ ಬ್ಯಾಂಕಿಗೆ ವಾಪಸ್ಸು ಮಾಡುವ ಎರವಲು ಸೇವೆ ಜಾರಿಯಲ್ಲಿರುತ್ತದೆ. ವಿದ್ಯಾರ್ಥಿಗಳ ಅಜ್ಜ ಅಥವಾ ಅಜ್ಜಿಯರು ಸದಸ್ಯರಾಗಿದ್ದಲ್ಲಿ ಅವರ ಮೊಮ್ಮಕ್ಕಳಿಗೂ ಸಹ ಬುಕ್ ಬ್ಯಾಂಕ್ ಸೌಲಭ್ಯವನ್ನು ನೀಡಲಾಗುತ್ತಿದೆ.

22. ಕೋರ್ ಬ್ಯಾಂಕ್ ವ್ಯವಸ್ಥೆ :

ಕೋರ್ ಬ್ಯಾಂಕ್ ಅಳವಡಿಕೆಯು ಸಂಪೂರ್ಣಗೊಂಡಿದ್ದು ಬ್ಯಾಂಕಿನ ಎಲ್ಲಾ ಶಾಖೆಗಳು ಕೋರ್ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ABB (Any Branch Banking) ಬ್ಯಾಂಕಿಂಗ್ ಸೌಲಭ್ಯದ ಅಡಿಯಲ್ಲಿ ಎಲ್ಲಾ ಶಾಖೆಗಳು ಒಳಪಟ್ಟಿದ್ದು, ಸದರಿ ಸೌಲಭ್ಯದಲ್ಲಿ ನಮ್ಮ ಗ್ರಾಹಕರು ಯಾವುದೇ ಶಾಖೆಯಲ್ಲಾದರೂ ನಿಗಧಿಪಡಿಸಿರುವ ಮಿತಿಗೊಳಪಟ್ಟು ನಗದಿನ ವ್ಯವಹಾರದ ಶೀಘ್ರ ಸೇವೆ ಪಡೆಯಲು ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಮಾನ್ಯ ಸದಸ್ಯರಲ್ಲಿ ಕೋರುತ್ತೇವೆ.

1. ಉಳಿತಾಯ ಖಾತೆ, ಚಾಲ್ತಿ ಖಾತೆ ಹಾಗೂ ಓ.ಡಿ. ಖಾತೆಗಳ ನಗದು ಜಮಾ, ಖರ್ಚು ವ್ಯವಹಾರಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಚೆಕ್ಕುಗಳ ವರ್ಗಾವಣೆಯು ನಮ್ಮ ಬ್ಯಾಂಕಿನ ಶಾಖೆಗಳ ಚೆಕ್ಕುಗಳಿಗೆ ಮಾತ್ರ ಅನ್ವಯಿಸುತ್ತದೆ.

3. ನಗದು ವ್ಯವಹಾರದ ಗರಿಷ್ಟ ಮಿತಿ ರೂ.50,000/– ಮಾತ್ರ.
4. ಖಾತೆದಾರರಿಗೆ ಮಾತ್ರ ನಗದು ಪಡೆಯಲು ಅವಕಾಶವಿರುತ್ತದೆ.

ಗ್ರಾಹಕರಿಗೆ ತ್ವರಿತ ನಗದು ಪಾವತಿಗಾಗಿ ನೇರ ನಗದು ಪಾವತಿ “Teller Counter” ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಹಾಗೂ ಈಗಾಗಲೇ ನೊಂದಾಯಿತ ಗ್ರಾಹಕರುಗಳಿಗೆ ಎಸ್.ಎಂ.ಎಸ್. ಸೇವೆ ಒದಗಿಸಲಾಗುತ್ತಿದ್ದು, ಈವರೆಗೆ ಎಸ್.ಎಂ.ಎಸ್. ಸೇವೆ ಪಡೆಯಲು ಹೆಸರು ನೊಂದಾಯಿಸದ ಗ್ರಾಹಕರು ಅವರ ಹೆಸರನ್ನು ನೊಂದಾಯಿಸಿಕೊಂಡು ಎಸ್.ಎಂ.ಎಸ್ ಸೌಲಭ್ಯವನ್ನು ಪಡೆಯುವುದು.

23. ಮಾನವ ಸಂಪನ್ಮೂಲ :

ಪ್ರಸಕ್ತ ಬ್ಯಾಂಕೋದ್ಯಮದ ವಾತಾವರಣವು ತೀವ್ರ ಪೈಪೋಟಿಯನ್ನು ಎದುರಿಸುತ್ತಿದೆ. ಬ್ಯಾಂಕು ಗ್ರಾಹಕ ಸ್ನೇಹಿಯಾಗಿ ಅವರಿಗೆ ತೃಪ್ತಿಯಾಗುವ ಸೇವೆಗಳನ್ನು ಒದಗಿಸಲು ಮಾನವ ಸಂಪನ್ಮೂಲದ ಸಮಗ್ರ ಅಭಿವೃದ್ಧಿಯತ್ತ ಒತ್ತು ಕೊಟ್ಟು, ಅಗತ್ಯವಿರುವ ವಿವಿಧ ತರಬೇತಿಗಳನ್ನು ಸಕಾಲದಲ್ಲಿ ಅವರಿಗೆ ಒದಗಿಸಿ ಅವರು ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು ಹಾಗೂ ಅವರ ದಕ್ಷತೆ, ಕಾರ್ಯಕುಶಲತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಿಬ್ಬಂದಿಗಳಿಗೆ ತರಬೇತಿ ನೀಡಲು ಹಾಗೂ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸ್ಪೂರ್ತಿಗೊಳಿಸಲು ನಿರ್ದೇಶಕ ಮಂಡಳಿಯು ಶ್ರಮಿಸುತ್ತಿದೆ.

ಬ್ಯಾಂಕಿನ ಅನುಮೋದಿತ ವೃಂದ ಬಲ ಹಾಗೂ ಪ್ರಸಕ್ತವಿರುವ ಸಂಖ್ಯಾ ಬಲವು ಈ ಕೆಳಕಂಡಂತಿದೆ.

ಹಾಲಿ ಕಾರ್ಯನಿರತ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಹುದ್ದೆಯ ಹೆಸರು	ಮಂಜೂರಾತಿ ರೀತ್ಯಾ	ಕಾರ್ಯನಿರತ ಸಿಬ್ಬಂದಿ
1	ಮುಖ್ಯಕಾರ್ಯನಿರ್ವಾಹಕರು	01	01
2	ಅನುಪಾಲನಾಧಿಕಾರಿ	01	01
3	ಶಾಖಾ ವ್ಯವಸ್ಥಾಪಕರು	12	12
4	ಈ.ಡಿ.ಪಿ ವ್ಯವಸ್ಥಾಪಕರು	01	01
5	ಲೆಕ್ಕಿಗರು	14	08
6	ಹಿರಿಯ ಸಹಾಯಕರು	22	22
7	ಕಿರಿಯ ಸಹಾಯಕರು	27	17
8	ಕಛೇರಿ ಸಹಾಯಕರು	20	18
9	ವಾಹನ ಚಾಲಕರು	03	03
10	ಶೀಘ್ರ ಲಿಪಿಗಾರರು	01	–
	ಒಟ್ಟು	**102**	**83**

ಕೃತಜ್ಞತೆಗಳು :

ಬ್ಯಾಂಕಿನ ಯಶಸ್ಸಿಗೆ ಠೇವಣಿ ಸಂಗ್ರಹ ಹಾಗೂ ಸಾಲ ವಿತರಣೆ ಮೂಲಾಧಾರ. ನಮ್ಮ ಕೋರಿಕೆಗೆ ಮನ್ನಣೆಯಿತ್ತು ಬ್ಯಾಂಕಿನಲ್ಲಿ ಠೇವಣಿಯನ್ನು ತೊಡಗಿಸಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಠೇವಣಿದಾರರಿಗೂ, ಗ್ರಾಹಕರಿಗೂ ಅಲ್ಲದೆ ವೇಳೆಗೆ ಸರಿಯಾಗಿ ಕಂತು ಮತ್ತು ಬಡ್ಡಿ ಪಾವತಿಸುವ ಮೂಲಕ ಸಾಲ ಮರುಪಾವತಿಸಿದ ಸದಸ್ಯರುಗಳೆಲ್ಲರಿಗೂ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಈ ಕೆಳಕಂಡ ಸಂಸ್ಥೆಗಳು ನಮ್ಮ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಬ್ಯಾಂಕಿನ ಪುರೋಭಿವೃದ್ಧಿಗೆ ಕಾರಣರಾಗಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇವೆ.

ದೇವಾಂಗ ಸಂಘ, ದೇವಾಂಗ ಯೂನಿಯನ್ ಸ್ಪೋರ್ಟ್ಸ್ ಕ್ಲಬ್, ಶ್ರೀ ಹಂಪಿ ಹೇಮಕೂಟ, ಶ್ರೀ ಗಾಯಿತ್ರಿ ಪೀಠ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾ ಸ್ವಾಮೀಜಿ, ಶ್ರೀ ಗಾಯಿತ್ರಿ ಪೀಠ ಮಹಾ ಸಂಸ್ಥಾನ, ಶ್ರೀ ಓಣಿ ಆಂಜನೇಯ ಸ್ವಾಮಿ ಟೆಂಪಲ್ ಟ್ರಸ್ಟ್, ಶ್ರೀ ಮಾರುತಿ ಗೃಹ ನಿರ್ಮಾಣ ಸೊಸೈಟಿ, ಮೈಸೂರು ಪವರ್‌ಲೂಂ ಸಿಲ್ಕ್ ಮ್ಯಾನುಫ್ಯಾಕ್ಚರರ್ಸ್ ಕೋ–ಆಪರೇಟಿವ್ ಸೊಸೈಟಿ ಲಿ., ಕರ್ನಾಟಕ ರಾಜ್ಯ ಪವರ್‌ಲೂಂ ಮಾರ್ಕೆಟಿಂಗ್ ಫೆಡರೇಷನ್, ಕೆ.ಆರ್.ಶೆಟ್ಟಿಪೇಟೆ ಮರ್ಚೆಂಟ್ಸ್ ಅಸೋಸಿಯೇಟ್ಸ್, ಶ್ರೀ ವಿನಾಯಕ ವಿದ್ಯಾಸಂಸ್ಥೆ, ಅಮರಜ್ಯೋತಿ ಲೈಬ್ರರಿ, ಮೈಸೂರು ಪ್ರಾಂತೀಯ ರೇಷ್ಮೆ ಕೈಮಗ್ಗದವರ ಸಹಕಾರ ಸಂಘ, ಮುದ್ದಪ್ಪ ಬಿ.ವಿ. ವೆಂಕಟಮ್ಮ ಮುದ್ದಪ್ಪ ಸೇವಾ ಸಮಿತಿ, ಕಾಮನಗುಡಿ ಚ್ಯಾರಿಟೀಸ್, ಆಂಧ್ರ ದೇವಾಂಗ ಸಂಘ, ಮೆ:ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ, ಶ್ರೀ ಜೇವ್ಹೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ., ಶ್ರೀ ಜೇವ್ಹೇಶ್ವರ ವಿದ್ಯಾಭಿವೃದ್ಧಿ ಟ್ರಸ್ಟ್, ತೊಗಟವೀರ ಸಂಘ, ಗಾಯಿತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಶ್ರೀ ವೀರಶೈವ ಸಧರ್ಮ ವರ್ಧಿನಿ ಸಂಘ, ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದ ನ್ಯಾಸ, ಶ್ರೀ ಸಿದ್ದೇಶ್ವರ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ, ಶ್ರೀ ಚೌಡೇಶ್ವರಿ ಚಾರಿಟೆಬಲ್ ಟ್ರಸ್ಟ್–ಲಕ್ಕಸಂದ್ರ, ಶ್ರೀ ಕೋದಂಡರಾಮ ಟೆಂಪಲ್ ಟ್ರಸ್ಟ್–ಪ್ರಕಾಶನಗರ, ನವಜ್ಯೋತಿ ಕನ್ನಡ ಕಲಾ ಸಂಘ–ಆನೇಕಲ್, ಶಾರದಾ ಸೇವಾಶ್ರಮ–ದೊಡ್ಡಬಳ್ಳಾಪುರ, ದಿ ಮೈಸೂರ್ ಸಿಲ್ಕ್ ಹ್ಯಾಂಡ್ ಲೂಂ ವೀವರ್ಸ್ ಅಸೋಸಿಯೇಷನ್ ಹಾಗೂ ಬ್ಯಾಂಕಿನ ಕಾರ್ಯನಿರ್ವಹಣೆಗಾಗಿ ಮತ್ತು ದಿನನಿತ್ಯದ ವ್ಯವಹಾರವು ಸುಗಮವಾಗಿ ಸಾಗಲು ಸಹಕರಿಸಿದ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಐ.ಡಿ.ಬಿ.ಐ. ಬ್ಯಾಂಕ್, ಇಂಡಸ್‌ಇಂದ್ ಬ್ಯಾಂಕ್, ಐ.ಸಿ.ಐ.ಸಿ.ಐ. ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ (ವಿಜಯ ಬ್ಯಾಂಕ್)–ಗೊಟ್ಟಿಗೆರೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ–ಸೆಂಟ್ ಮಾರ್ಕ್ಸ್ ರಸ್ತೆ ಮತ್ತು ಆನೇಕಲ್, ಕೆನರಾ ಬ್ಯಾಂಕ್ (ಸಿಂಡಿಕೇಟ್ ಬ್ಯಾಂಕ್) ಆನೇಕಲ್, ಇಂಡಿಯನ್ ಬ್ಯಾಂಕ್ ಅವೆನ್ಯೂ ರಸ್ತೆ, ಆಕ್ಸಿಸ್ ಬ್ಯಾಂಕ್‌ಗಳ ಅಧಿಕಾರಿಗಳಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಕಾಲಕಾಲಕ್ಕೆ ಸೂಕ್ತ ನಿರ್ದೇಶನ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ ನಾವು ಅಭಾರಿಯಾಗಿದ್ದೇವೆ. ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ನೀಡುತ್ತಿರುವ ಸಹಕಾರ ಇಲಾಖೆಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ. ಪುಂಡಲೀಕ ಎನ್.ಕೆರೂರ್ ಹಾಗೂ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ. ಸುಧಾಕರ ಭಟ್‌ರವರು ಬ್ಯಾಂಕಿನ ಅಭಿವೃದ್ಧಿಗೆ ಉಪಯುಕ್ತ ಸಲಹೆಗಳನ್ನು ನೀಡಿರುತ್ತಾರೆ. ಇವರುಗಳಿಗೂ ಸಹ ನಮ್ಮ ಕೃತಜ್ಞತೆಗಳು.

2024–25ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ಸನ್ನದು ಲೆಕ್ಕ ಪರಿಶೋಧಕರಾದ ಮೆ: ಎಸ್.ವಿ.ಕೆ.ಹೆಚ್. & ಕಂ., ರವರಿಗೆ ನಾವು ವಂದಿಸುತ್ತೇವೆ.

ಬ್ಯಾಂಕಿನ ಪುರೋಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ನಾವು ವಂದಿಸುತ್ತೇವೆ.

ಬ್ಯಾಂಕಿನ ಸದಸ್ಯರುಗಳು ಶಿಸ್ತು ಕಾಪಾಡಿಕೊಂಡು ಬ್ಯಾಂಕಿನ ನಿರ್ದೇಶಕ ಮಂಡಳಿಯೊಂದಿಗೆ ಮಧುರ ಸಂಬಂಧ ಇಟ್ಟುಕೊಂಡು ಬ್ಯಾಂಕಿನ ಸಂಪನ್ಮೂಲಗಳನ್ನು ಗಣನೀಯವಾಗಿ ಹೆಚ್ಚಿಸಲು ಸಹಕಾರ ನೀಡಿದ್ದಕ್ಕಾಗಿ ತಮಗೆಲ್ಲಾ ವಂದನೆಯನ್ನು ಅರ್ಪಿಸುತ್ತಿದ್ದೇವೆ.

ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ,
ಸಹಿ/–
ಶ್ರೀನಿವಾಸ ಮೂರ್ತಿ ಬಿ.
ಮುಖ್ಯ ಕಾರ್ಯನಿರ್ವಾಹಕರು (ಪ್ರ).

ವಿಷಯ 7: 2024–25ನೇ ಸಾಲಿಗೆ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ.

ಕ್ರಮ ಸಂಖ್ಯೆ	ವಿವರ	2024–25ಕ್ಕೆ ಮಂಜೂರಾದದ್ದು ರೂ. ಪೈ.	2024–25ಕ್ಕೆ ಖರ್ಚಾದದ್ದು ರೂ. ಪೈ.	ಹೆಚ್ಚುವರಿ ರೂ. ಪೈ.
1	ಠೇವಣಿಗಳ ಮತ್ತು ಸಾಲಗಳ ಮೇಲಿನ ಬಡ್ಡಿ	22,50,00,000.00	22,86,95,138.50	36,95,138.50
2	ಅಂಚೆ, ತಂತಿ, ದೂರವಾಣಿ	6,00,000.00	6,86,651.56	86,651.56
3	ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ ಇತರೇ	67,00,000.00	77,84,090.26	10,84,090.26
4	ಸಮಾರಂಭ	5,00,000.00	7,96,497.79	2,96,497.79
5	ಜಾಹೀರಾತು	3,00,000.00	4,09,181.50	1,09,181.50
6	ಕಾನೂನು ವೆಚ್ಚ ಹಾಗೂ ವೃತ್ತಿಪರ ಶುಲ್ಕ	5,00,000.00	6,69,039.00	1,69,039.00
7	ಮರಮುಟ್ಟುಗಳು, ವಾಹನ, ಗಣಕಯಂತ್ರ ಸವಕಳಿ	35,00,000.00	36,02,973.00	1,02,973.00
8	ಕಲ್ಪತರು ಏಜೆಂಟರ ಕಮಿಷನ್	15,00,000.00	15,30,814.00	30,814.00
9	ಲೆಕ್ಕಪರಿಶೋಧನಾ ಶುಲ್ಕ	12,00,000.00	12,15,400.00	15,400.00
10	ಕಛೇರಿ ನಿರ್ವಹಣೆ / ಪಾಲನೆ	65,00,000.00	83,18,751.25	18,18,751.25

1. ವರದಿ ಸಾಲಿನಲ್ಲಿ ಹೆಚ್ಚುವರಿಯಾಗಿ ಸಂಗ್ರಹಿಸಲಾದ ಠೇವಣಿಗಳು ಗರಿಷ್ಠ ಬಡ್ಡಿದರದ ಠೇವಣಿಗಳಾಗಿದ್ದು, ಅವುಗಳಿಗೆ ಬ್ಯಾಂಕು ನಿಗಧಿಪಡಿಸಿದ ಗರಿಷ್ಠ ಬಡ್ಡಿದರ ನೀಡಿದ್ದರಿಂದ ಹೆಚ್ಚುವರಿ ಠೇವಣಿ ಬಡ್ಡಿ ಖರ್ಚು ತಗುಲಿರುತ್ತದೆ.
2. ಸದಸ್ಯರುಗಳಿಗೆ ಹಾಗೂ ಖಾತೆದಾರರುಗಳಿಗೆ ಕೆ.ವೈ.ಸಿ ದಾಖಲಾತಿಗಳನ್ನು ಸಲ್ಲಿಸುವಂತೆ ಪತ್ರ ವ್ಯವಹಾರ ನಡೆಸಿದುದರಿಂದ ಹಾಗೂ 10 ವರ್ಷಗಳಿಗೆ ಮೇಲ್ಪಟ್ಟು ಖಾತೆಯಲ್ಲಿ ವಹಿವಾಟು ನಡೆಸದ ಗ್ರಾಹಕರುಗಳಿಗೆ ತಿಳುವಳಿಕೆ ಪತ್ರಗಳನ್ನು ಕಳುಹಿಸಿದ ಸಲುವಾಗಿ ಅಂಚೆ ವೆಚ್ಚದಲ್ಲಿ ಹೆಚ್ಚುವರಿ ಖರ್ಚು ಆಗಿರುತ್ತದೆ.
3. ದೇವಾಂಗ ಮಾರುಕಟ್ಟೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮುಖ್ಯ ಶಾಖೆಯ ಕಛೇರಿಯನ್ನು ನೂತನ ಸ್ಥಳಕ್ಕೆ ಸ್ಥಳಾಂತರಿಸಿದುದರಿಂದ ಬಾಡಿಗೆ ವೆಚ್ಚ ಹಾಗೂ ನೂತನ ಆಡಳಿತ ಕಛೇರಿ ಕಟ್ಟದದಲ್ಲಿ ಹೆಚ್ಚುವರಿ ವಿದ್ಯುತ್ ಸಂಪರ್ಕ ಪಡೆಯಲು ಹೆಚ್ಚಿನ ಖರ್ಚು ಭರಿಸಲಾಗಿರುತ್ತದೆ.
4. ವರದಿ ಸಾಲಿನಲ್ಲಿ ಮುಖ್ಯ ಶಾಖೆ ಹಾಗೂ ಆಡಳಿತ ಕಛೇರಿಯನ್ನು ನೂತನ ಸ್ಥಳಕ್ಕೆ ಸ್ಥಳಾಂತರಿಸಿದ ಸಂದರ್ಭದಲ್ಲಿ ಕೈಗೊಂಡ ಪೂಜಾ ಕಾರ್ಯಕ್ರಮಗಳಿಗಾಗಿ ಹಾಗೂ ಪೂಜಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿಗಳಿಗೆ ಹಾಗೂ ಸದಸ್ಯರುಗಳಿಗೆ ತಿಂಡಿ ವ್ಯವಸ್ಥೆ ಕಲ್ಪಿಸಿದುದರಿಂದ ಹೆಚ್ಚುವರಿ ಖರ್ಚು ಆಗಿರುತ್ತದೆ.
5. ವರದಿ ಸಾಲಿನಲ್ಲಿ ಕೆಲ ಸಂಘ ಸಂಸ್ಥೆಗಳಿಗೆ ಬ್ಯಾಂಕಿನ ವತಿಯಿಂದ ಜಾಹೀರಾತುಗಳನ್ನು ನೀಡಿದುದರ ಸಂಬಂಧ ಹೆಚ್ಚುವರಿ ಖರ್ಚು ಆಗಿರುತ್ತದೆ.
6. ವರದಿ ಸಾಲಿನಲ್ಲಿ ಬ್ಯಾಂಕಿನ ಚರಾಸ್ತಿಗಳ ಗುರುತಿಸುವಿಕೆಗೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ Cyber Security ಭಾಗವಾಗಿ Gap Analysis ಆಡಿಟ್ ಮಾಡಿಸಿದುದರ ಸಂಬಂಧ ಹೆಚ್ಚುವರಿ ಖರ್ಚು ಆಗಿರುತ್ತದೆ.
7. ವರದಿ ಸಾಲಿನಲ್ಲಿ ಸಿಬಿಎಸ್ ತಂತ್ರಾಂಶದ ನಿರ್ವಹಣೆಗೆ ಅವಶ್ಯಕವಿರುವ ಆಕ್ಟಿವ್ ಡೈರೆಕ್ಟರಿ ಯಂತ್ರವನ್ನು ಖರೀದಿಸಿ ಅಳವಡಿಸಿದುದರ ಸಂಬಂಧ ಸವಕಳಿ ವೆಚ್ಚ ಹೆಚ್ಚಾಗಿರುತ್ತದೆ.
8. ವರದಿ ಸಾಲಿನಲ್ಲಿ ಕಲ್ಪತರು ಠೇವಣಿ ಸಂಗ್ರಹಗಾರರು ಹೆಚ್ಚು ಠೇವಣಿ ಸಂಗ್ರಹಿಸಿದುದರಿಂದ ಹೆಚ್ಚುವರಿ ಕಮಿಷನ್ ನೀಡಿದುದರ ಸಲುವಾಗಿ ಕಮಿಷನ್ ಖರ್ಚು ಹೆಚ್ಚಾಗಿರುತ್ತದೆ.
9. ವರದಿ ಸಾಲಿನಲ್ಲಿ ಆಡಿಟ್ ಶುಲ್ಕ ಪಾವತಿಸುವ ಸಂದರ್ಭದಲ್ಲಿ ಜಿ.ಎಸ್.ಟಿ ಪಾವತಿಸಿದುದರಿಂದಾಗಿ ಹೆಚ್ಚುವರಿ ಖರ್ಚಾಗಿರುತ್ತದೆ.
10. ವರದಿ ಸಾಲಿನಲ್ಲಿ ಆಡಳಿತ ಕಛೇರಿ ಸ್ಥಳಾಂತರದ ಸಂಬಂಧ, ಸುಧಾಮನಗರದಲ್ಲಿ ಬ್ಯಾಂಕು ಹೊಂದಿರುವ ಕಟ್ಟಡದಲ್ಲಿ ಆಡಳಿತ ಕಛೇರಿ ನಿರ್ವಹಣೆಗಾಗಿ ಅಗತ್ಯ ಸಿವಿಲ್ ರಿಪೇರಿ ಕಾಮಗಾರಿ ಹಾಗೂ ಕಟ್ಟಡ ನಿರ್ವಹಣೆಗೆ ಪಾವತಿಸಲಾದ ವೆಚ್ಚಗಳಿಂದಾಗಿ ಹೆಚ್ಚುವರಿ ಖರ್ಚು ಆಗಿರುತ್ತದೆ.

ವಿಷಯ 8: 2024–25ನೇ ಸಾಲಿನ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು.

ದಿನಾಂಕ : 20.06.2025 ರಂದು ನಡೆದ ನಿರ್ದೇಶಕ ಮಂಡಳಿ ಸಭೆಯ ನಿರ್ಣಯ.

ಕ್ರ. ಸಂ.	ವಿವರ	ರೂ. ಪೈ.	ರೂ. ಪೈ.
	2024–25ನೇ ಸಾಲಿನ ನಿವ್ವಳ ಲಾಭ		**2,61,31,408.57**
1	ಆಪದ್ಧನ ನಿಧಿಗೆ ಶೇಕಡ 25%	65,32,852.00	**1,95,98,556.57**
2	ಸಹಕಾರ ವಿದ್ಯಾಭ್ಯಾಸ ನಿಧಿ ಶೇಕಡ 2%	3,91,971.00	**1,92,06,585.57**
3	ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಅಭಿವೃದ್ಧಿ ಕಾರ್ಯಕ್ಕೆ ಶೇಕಡ 1%	1,92,066.00	**1,90,14,519.57**
4	ಸಿಬ್ಬಂದಿ ಗಳಿಕೆ ರಜೆ ನಗದೀಕರಣ ನಿಧಿ	13,00,000.00	**1,77,14,519.57**
5	ಹೂಡಿಕೆಗಳ ಮೇಲಿನ ಏರಿಳಿತ ನಿಧಿ	57,00,000.00	**1,20,14,519.57**
6	ಸದಸ್ಯರ ಮರಣ ಪರಿಹಾರ ನಿಧಿ	10,00,000.00	**1,10,14,519.57**
7	ವಿದ್ಯಾರ್ಥಿಗಳ ಪ್ರೋತ್ಸಾಹ ನಿಧಿ	5,00,000.00	**1,05,14,519.57**
8	ಧರ್ಮದ ನಿಧಿ	2,00,000.00	**1,03,14,519.57**
9	ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ	5,00,000.00	**98,14,519.57**
10	ಷೇರು ಡಿವಿಡೆಂಡ್ ಶೇಕಡ 12%	74,59,801.00	**23,54,718.57**
11	ಸಿಬ್ಬಂದಿ ಬೋನಸ್ / ಎಕ್ಸ್ ಗ್ರೇಷಿಯಾ ಶೇಕಡ 5%	22,63,462.00	**91,256.57**
12	ಉಳಿಕೆ ಮೊತ್ತ ಆಪದ್ಧನ ನಿಧಿಗೆ	**91,256.57**	

ವಿಷಯ 9: 2025–26ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು.

ಕ್ರ. ಸಂ.	ವಿವರ	2024–25ನೇ ಸಾಲಿಗೆ ಶಿಫಾರಸ್ಸು	2024–25ನೇ ಸಾಲಿಗೆ ತಗುಲಿದ ವೆಚ್ಚ	2025–26ನೇ ಸಾಲಿಗೆ ಶಿಫಾರಸ್ಸು
1	ಠೇವಣಿಗಳ ಮತ್ತು ಸಾಲಗಳ ಮೇಲಿನ ಬಡ್ಡಿ	22,50,00,000.00	22,86,95,138.50	25,00,00,000.00
2	ಸಿಬ್ಬಂದಿ ಸಂಬಳ ಪಿಎಫ್ ವಗೈರೆ	6,60,00,000.00	6,15,33,253.00	6,25,00,000.00
3	ಅಂಚೆ, ತಂತಿ, ದೂರವಾಣಿ	6,00,000.00	6,86,651.56	7,00,000.00
4	ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ, ಇತರೇ	67,00,000.00	77,84,090.26	57,00,000.00
5	ಲೇಖನ ಸಾಮಗ್ರಿ ಮತ್ತು ಮುದ್ರಣ	10,00,000.00	6,59,682.26	12,00,000.00
6	ನಿರ್ದೇಶಕರ ಸಭೆ ಖರ್ಚು	2,00,000.00	1,24,447.00	2,00,000.00
7	ಸಮಾರಂಭ	5,00,000.00	7,96,497.79	8,00,000.00
8	ಇತರೇ ಖರ್ಚು	9,50,000.00	9,38,852.10	9,50,000.00
9	ಸರ್ವಸದಸ್ಯರ ಸಭೆ ಖರ್ಚು	45,00,000.00	40,90,303.26	45,00,000.00
10	ಜಾಹೀರಾತು	3,00,000.00	4,09,181.50	5,00,000.00
11	ವಿಮೆ ಕಂತು (ಬ್ಯಾಂಕು ಪಾಲಿಸಿ ಮತ್ತು ಠೇವಣಿ)	1,00,00,000.00	90,12,080.34	1,00,00,000.00
12	ಸಾರಿಗೆ ವೆಚ್ಚ / ತರಬೇತಿ / ಪ್ರಯಾಣ	10,00,000.00	5,35,589.00	12,00,000.00
13	ಸಂಘ ಸಂಸ್ಥೆಗಳ ನೊಂದಣಿ ಮತ್ತು ವಾರ್ಷಿಕ ಶುಲ್ಕ	2,00,000.00	1,44,050.00	2,00,000.00
14	ಕಾನೂನು ವೆಚ್ಚ ಹಾಗೂ ವೃತ್ತಿಪರ ಶುಲ್ಕ	5,00,000.00	6,69,039.00	7,50,000.00
15	ಮರಮುಟ್ಟುಗಳು, ವಾಹನ, ಗಣಕಯಂತ್ರ ಸವಕಳಿ	35,00,000.00	36,02,973.00	60,00,000.00
16	ಕಲ್ಪತರು ಏಜೆಂಟರ ಕಮೀಷನ್	15,00,000.00	15,30,814.00	16,00,000.00
17	ವಾಹನ ರಿಪೇರಿ, ನಿರ್ವಹಣೆ	4,00,000.00	3,27,556.00	4,00,000.00
18	ನಿರ್ದೇಶಕರ ಸಭಾ ಭತ್ಯೆ	12,00,000.00	8,52,000.00	12,00,000.00
19	ಗಣಕಯಂತ್ರಗಳ ನಿರ್ವಹಣೆ	5,00,000.00	4,17,730.32	5,00,000.00
20	ಇತರೇ ಯಂತ್ರಗಳ ನಿರ್ವಹಣೆ	3,00,000.00	2,29,561.24	3,00,000.00
21	ಸಾಫ್ಟ್‌ವೇರ್ ಖರ್ಚು	50,00,000.00	40,11,370.58	78,00,000.00
22	ಸಿಬ್ಬಂದಿ ಗ್ರಾಚುಯಿಟಿ	55,00,000.00	2,287.00	55,00,000.00
23	ಸಮವರ್ತಿ ಲೆಕ್ಕ ಮತ್ತು ಈಡಿಪಿ ಶುಲ್ಕ ಅಂತರಿಕ ಲೆಕ್ಕ, 15ಜಿ & ಹೆಚ್	15,00,000.00	13,30,720.00	16,00,000.00
24	ಲೆಕ್ಕ ಪರಿಶೋಧನಾ ಶುಲ್ಕ	12,00,000.00	12,15,400.00	12,50,000.00
25	ಕಛೇರಿ ನಿರ್ವಹಣೆ / ಪಾಲನೆ	65,00,000.00	83,18,751.25	65,00,000.00
26	ಎಂ.ಐ.ಸಿ.ಆರ್. ಖರ್ಚು	5,00,000.00	3,60,227.58	5,00,000.00
27	ಡಿಜಿಟಲ್ ಸಹಿ ಖರ್ಚು	20,000.00	15,744.46	25,000.00
28	ಎ ಟಿ ಎಂ/ಐಎಂಪಿಎಸ್/ಯುಪಿಐ		10,62,210.66	12,00,000.00
29	ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ	15,00,000.00	11,96,964.00	15,00,000.00
	ಒಟ್ಟು	**34,65,70,000.00**	**34,05,53,165.66**	**37,50,75,000.00**

2025–26ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ

ಕ್ರಮ ಸಂಖ್ಯೆ	ವಿವರ	2024–25ಕ್ಕೆ ಬಂದಿರುವ ವರಮಾನ	2025–26ನೇ ಸಾಲಿನಲ್ಲಿ ನಿರೀಕ್ಷಣೆ
1	ಸಾಲಗಳ ಮೇಲಿನ ಬಡ್ಡಿ	22,89,72,628.00	24,30,00,000.00
2	ಹೂಡಿಕೆಗಳ ಮೇಲೆ ಬಡ್ಡಿ	13,65,37,398.00	16,97,00,000.00
3	ಕಮೀಷನ್ ವಗೈರೆ	1,26,54,963.13	1,30,00,000.00
4	ಇತರೇ	20,90,195.43	25,00,000.00
	ಜುಮ್ಲಾ	**38,02,55,184.56**	**42,82,00,000.00**

1	2025–26 ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ	42,82,00,000.00
2	2025–26 ನೇ ಸಾಲಿಗೆ ನಿಯಮಾನುಸಾರ ಈ ಕೆಳಕಂಡಂತೆ ಕಾದಿರಿಸುವುದು	
	ಅ) ಹೂಡಿಕೆಗಳ ಮೇಲೆ ಕಾದಿರಿಸುವುದು	6,00,000.00
		42,76,00,000.00
3	2025–26 ನೇ ಸಾಲಿಗೆ ಅಂದಾಜು ಖರ್ಚು	37,50,75,000.00
		5,25,25,000.00
4	ವರಮಾನ ತೆರಿಗೆ	1,32,19,492.00
5	**2025–26 ನೇ ಸಾಲಿಗೆ ನಿರೀಕ್ಷಿಸುವ ನಿವ್ವಳ ಲಾಭ**	**3,93,05,508.00**

ವಿಷಯ 10: ಬ್ಯಾಂಕಿನ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ:

2025–26ರ ವಾರ್ಷಿಕ ಸಾಲಿಗೆ ನಮ್ಮ ನಿರ್ದೇಶಕರ ಮಂಡಳಿಯು ಕೆಳಕಂಡ ಗುರಿಗಳನ್ನು ಹೊಂದಿರುತ್ತದೆ.

1. ಬ್ಯಾಂಕಿನ ಒಟ್ಟಾರೆ ಠೇವಣಿ ಸಂಗ್ರಹದ ಗುರಿ ರೂ.401.00 ಕೋಟಿಗಳು.
2. ಬ್ಯಾಂಕಿನ ಒಟ್ಟಾರೆ ಸಾಲ ಮುಂಗಡಗಳ ಗುರಿ ರೂ.236.00 ಕೋಟಿಗಳು.
3. ಬ್ಯಾಂಕು ಹಾಲಿ ಹೊಂದಿರುವ ಹಾರ್ಡ್‌ವೇರ್ ಮತ್ತು ಸಿಬಿಎಸ್ ತಂತ್ರಾಂಶವನ್ನು ಉನ್ನತೀಕರಿಸುವುದು.
4. ನಿರ್ದೇಶಕರುಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ತರಭೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
5. ಸದಸ್ಯರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು ಉದಾಹರಣೆಗೆ ಬುಕ್ ಬ್ಯಾಂಕ್ ಸೇವೆಯನ್ನು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರವನ್ನು ಹೆಚ್ಚು ಹೆಚ್ಚು ನೀಡಲು ಕ್ರಮವಿಡುವುದು.
6. ಸರ್ಕಾರದ ಆದೇಶದ ಮೇರೆಗೆ ಶೂನ್ಯ ಬಡ್ಡಿ, ಶೇ.1 ಹಾಗೂ ಶೇ.3 ರ ಬಡ್ಡಿದರದ ನೇಕಾರಿಕೆ ಸಾಲಗಳನ್ನು ಮುಂದುವರೆಸುವುದು.
7. ಆಯಾ ಶಾಖಾ ಸ್ಥಳಗಳಲ್ಲಿಯೇ ಸದಸ್ಯರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸುವುದು.
8. UPI ಸೇವೆ ಒದಗಿಸುವುದು.
9. ನೇಕಾರ ಸದಸ್ಯರುಗಳಿಗೆ ಸರ್ಕಾರದ ಅನುದಾನಗಳನ್ನು ತ್ವರಿತವಾಗಿ ಒದಗಿಸುವುದು.
10. ನೂತನವಾಗಿ ಗೊಟ್ಟಿಗೆರೆಯಲ್ಲಿ ಬ್ಯಾಂಕಿನ ಉಪಯೋಗಕ್ಕಾಗಿ ಖರೀದಿಸಿರುವ ನಿವೇಶನದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸುವುದು.

ವಿಷಯ 11: ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ.

ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಅಧಿಕೃತ ಷೇರು ಬಂಡವಾಳವನ್ನು ರೂ.20.00 ಕೋಟಿಗೆ ಅನುಮೋದನೆ ಪಡೆಯಲಾಗಿದ್ದು, ಪ್ರಸಕ್ತ ಸಾಲಿಗೆ ಅದನ್ನು ಮುಂದುವರೆಸಿಕೊಂಡು ಹೋಗಲು ಆಡಳಿತ ಮಂಡಳಿ ಶಿಫಾರಸ್ಸು ಮಾಡಿ ಸರ್ವಸದಸ್ಯರ ಅನುಮೋದನೆ ಕೋರಲಾಗಿದೆ.

ವಿಷಯ 12: ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಮಾರ್ಗಸೂಚಿಯಂತೆ 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಂಡಿರುವ ಬಗ್ಗೆ.

ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯಿದೆಯ ತಿದ್ದುಪಡಿಯಂತೆ ಶಾಸನ ಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವ ಅಧಿಕಾರ ಆರ್.ಬಿ.ಐ ಗೆ ಬಂದ ನಂತರ ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಆರ್.ಬಿ.ಐ/2021–22/25ಡಿ.ಓ.ಎಸ್.ಸಿ.ಓ.ಎ.ಆರ್.ಜಿ/ಎಸ್.ಇ.ಸಿ.01/08.91.001/ 2021–22ದಿ:27.04.2021 ರನ್ವಯ ರೂ.1000.00 ಕೋಟಿವರೆಗೆ ಠೇವಣಿ ಹೊಂದಿರುವ ಬ್ಯಾಂಕುಗಳು ಲೆಕ್ಕಪರಿಶೋಧನೆಯನ್ನು ಪಾಲುದಾರಿಕೆ ಲೆಕ್ಕಪರಿಶೋಧನಾ ಸಂಸ್ಥೆಗಳಿಗೆ ನೀಡಬೇಕೆಂದು, ಸದರಿ ಸಂಸ್ಥೆಯಲ್ಲಿ ಇಬ್ಬರು ಪೂರ್ಣಾವಧಿಯ ಪಾಲುದಾರರಾಗಿರಬೇಕು. ಕನಿಷ್ಠ 03 ವರ್ಷದ ಅವಧಿವರೆಗಾದರೂ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದು, ಸಂಸ್ಥೆಯು ಸರ್ಕಾರದ ಆಡಿಟ್ ಎಂಪ್ಯಾನೆಲ್‌ಮೆಂಟ್‌ನಲ್ಲಿ ನೊಂದಣಿಯಾಗಿರಬೇಕು. ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವ ಇಬ್ಬರು ಲೆಕ್ಕಪರಿಶೋಧಕರಿಂದ ಒಪ್ಪಿಗೆ ಪತ್ರ ಪಡೆದು ಕಾರ್ಯಕಾರಿ ಮಂಡಳಿಯ ಶಿಫಾರಸ್ಸಿನೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಬೇಕಿರುತ್ತದೆ.

ಆರ್.ಬಿ.ಐ ಸುತ್ತೋಲೆಯ ಪ್ರಕಾರ ಮೆ॥ ಎಸ್.ವಿ.ಕೆ.ಹೆಚ್. & ಕಂ., ಶಾಸನಬದ್ಧ ಲೆಕ್ಕಪರಿಶೋಧಕರು, ಇವರನ್ನು 2025–26ನೇ ಸಾಲಿಗೆ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ 3ನೇ ಬಾರಿಗೆ ಮರು ನೇಮಿಸಲು ಅವಕಾಶವಿರುವುದರಿಂದ, ಮೆ॥ ಎಸ್.ವಿ.ಕೆ.ಹೆಚ್. & ಕಂ., ಶಾಸನಬದ್ಧ ಲೆಕ್ಕಪರಿಶೋಧಕರು ಇವರನ್ನು 3ನೇ ಬಾರಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಮರುನೇಮಕಗೊಳಿಸಲು ಹಾಗೂ ಲೆಕ್ಕಪರಿಶೋಧಕರ ಸಂಭಾವನೆಯನ್ನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಅನ್ವಯ ನಿಗಧಿಪಡಿಸಲು ದಿನಾಂಕ : **20.06.2025**ರ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ಭಾರತೀಯ ರಿಸರ್ವ್ ಬ್ಯಾಂಕಿಗೆ ಶಿಫಾರಸ್ಸನ್ನು ಸಲ್ಲಿಸಲಾಗಿದೆ.

ವಿಷಯ 13: ಬ್ಯಾಂಕಿನ ನಿರ್ದೇಶಕರುಗಳಿಗೆ, ಅವರ ಹತ್ತಿರದ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರು ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ.

ಪ್ರಸಕ್ತ ಸಾಲಿನಲ್ಲಿ ಚುನಾಯಿತರಾದ ನಿರ್ದೇಶಕರುಗಳಿಗಾಗಲಿ, ಅವರ ಹತ್ತಿರದ ಸಂಬಂಧಿಕರುಗಳಿಗಾಗಲಿ ಅಥವಾ ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗಾಗಲೀ ಯಾವುದೇ ರೀತಿಯ ಸಾಲವನ್ನು (ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ) ವರದಿ ಸಾಲಿನಲ್ಲಿ ಮಂಜೂರು ಮಾಡಿರುವುದಿಲ್ಲ.

ದಿನಾಂಕ : 09.07.2023 ರಲ್ಲಿ ನಡೆದ ಬ್ಯಾಂಕಿನ ನಿರ್ದೇಶಕ ಮಂಡಳಿ ಚುನಾವಣೆಯಲ್ಲಿ ಶ್ರೀ. ಡಿ.ಆರ್.ಗೋಪಾಲಕೃಷ್ಣರವರು ನಿರ್ದೇಶಕರಾಗಿ ಆಯ್ಕೆಗೊಂಡಿದ್ದು, ಅವರು ನಿರ್ದೇಶಕರಾಗಿ ಆಯ್ಕೆಗೊಳ್ಳುವ ಪೂರ್ವದಲ್ಲಿ ಗೊಟ್ಟಿಗೆರೆ ಶಾಖೆಯಲ್ಲಿ ಅವರ ಕುಟುಂಬದ ಸದಸ್ಯರಾದ ಶ್ರೀಮತಿ ರಮ್ಯ ಜಿ ಹಾಗೂ ವೇದಾವತಿ ಜಿ ರವರುಗಳು ನೇಕಾರಿಕೆ ಸಾಲ ಪಡೆದಿದ್ದು, ಸಾಲದ ಖಾತೆಗಳು ಸುಸ್ಥಿತಿಯಲ್ಲಿರುತ್ತದೆ. ಇವರು ಶ್ರೀ ದಾಸಿಮಯ್ಯ ದೇವಾಂಗ ಸಂಘ (ರಿ)., ಗೊಟ್ಟಿಗೆರೆ, ವೀವರ್ಸ್ ಕಾಲೋನಿ, ಬೆಂಗಳೂರು ಸಂಸ್ಥೆಯಲ್ಲಿ ಪದಾಧಿಕಾರಿಯಾಗಿದ್ದು, ಸಂಘದ ಒಡೆತನದಲ್ಲಿರುವ ಸ್ಥಿರಾಸ್ತಿ ಆಧಾರದ ಮೇಲೆ ಸಾಲ ಪಡೆದಿದ್ದು, ಸಾಲದ ಖಾತೆಯು ಸುಸ್ಥಿತಿಯಲ್ಲಿರುತ್ತದೆ.

ಕ್ರ ಸಂ	ನಿರ್ದೇಶಕರ ಸಂಬಂಧಿ ಹೆಸರು / ಸಂಸ್ಥೆಯ ಹೆಸರು	ಸಾಲದ ಖಾತೆ ಸಂಖ್ಯೆ	ಸಾಲದ ದಿನಾಂಕ	ಮಂಜೂರಾದ ಮೊತ್ತ	ಸಾಲದ ಬಾಕಿ	ಷರಾ
1	ರಮ್ಯ ಜಿ	WL–213	22.03.2022	90,000/–	36,000/–	ಸುಸ್ಥಿತಿಯಲ್ಲಿರುತ್ತದೆ
2	ವೇದಾವತಿ ಜಿ	WL–221	03.02.2023	90,000/–	52,500/–	ಸುಸ್ಥಿತಿಯಲ್ಲಿರುತ್ತದೆ
3	ಶ್ರೀ ದಾಸಿಮಯ್ಯ ದೇವಾಂಗ ಸಂಘ (ರಿ)	IPL-EMI –123	24.04.2023	10,00,000/–	7,74,558/–	ಸುಸ್ಥಿತಿಯಲ್ಲಿರುತ್ತದೆ

ವಿಷಯ 14: ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು.

ಪ್ರಸಕ್ತ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರು ಬ್ಯಾಂಕಿನ ವಿವಿಧ ಸೇವೆಗಳಾದ ಉಳಿತಾಯ / ರೆಕರಿಂಗ್ / ನಿಶ್ಚಿತ ಅವಧಿ ಠೇವಣಿ ಖಾತೆಗಳನ್ನು ಹೊಂದಿರುತ್ತಾರೆ.

ವಿಷಯ 15: ಬ್ಯಾಂಕಿನ ಉಪನಿಯಮಗಳ ತಿದ್ದುಪಡಿ ಅನುಮೋದನೆ ಬಗ್ಗೆ.

ಕ್ರಮ ಸಂಖ್ಯೆ	ಅಧ್ಯಾಯ/ ಬೈಲಾ ಸಂಖ್ಯೆ	ಹಾಲಿ ಇರುವ ನಿಯಮ	ತಿದ್ದುಪಡಿಸಿದ ನಿಯಮ	ತಿದ್ದಪಡಿಗೆ ಕಾರಣ
1	ಅಧ್ಯಾಯ 1– ಹೆಸರು, ವಿಳಾಸ ಮತ್ತು ಕಾರ್ಯ ಕ್ಷೇತ್ರದ ವ್ಯಾಪ್ತಿ ಬೈಲಾ ಸಂ.–02 ನೋಂದಾಯಿತ ಕಛೇರಿ	02.01 – ಬ್ಯಾಂಕಿನ ನೋಂದಾಯಿತ ಕಛೇರಿಯ ವಿಳಾಸವು ಎರಡನೇ ಮಹಡಿ, ದೇವಾಂಗ ಮಾರ್ಕೆಟ್, ದೇವರ ದಾಸಿಮಯ್ಯ ರಸ್ತೆ, (ಜೆ.ಎಂ.ರಸ್ತೆ), ಬೆಂಗಳೂರು–560002 ಎಂದು ಇರತಕ್ಕದ್ದು	02.01 – ಬ್ಯಾಂಕಿನ ನೋಂದಾಯಿತ ಕಛೇರಿಯ ವಿಳಾಸವು ನಂ.16, 1ನೇ "ಎ" ಮುಖ್ಯ ರಸ್ತೆ, ಸುಧಾಮನಗರ, ಬೆಂಗಳೂರು – 560 027 ಎಂದು ಇರತಕ್ಕದ್ದು	ಆ.ಕ.ಯನ್ನು ಬ್ಯಾಂಕು ಸುಧಾಮ ನಗರದಲ್ಲಿ ಹೊಂದಿರುವ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸ ಲಾಗಿರುತ್ತದೆ
2	ಅಧ್ಯಾಯ 1– ಹೆಸರು, ವಿಳಾಸ ಮತ್ತು ಕಾರ್ಯಕ್ಷೇತ್ರದ ವ್ಯಾಪ್ತಿ ಬೈಲಾ ಸಂ.–03 ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ	03.01 – ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಗೆ ಒಳಪಟ್ಟ ಪ್ರದೇಶಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸರಹದ್ದು ಮತ್ತು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ (ದೊಡ್ಡ ಬಳ್ಳಾಪುರ ಹೊರತುಪಡಿಸಿ) ಹಾಗೂ ರಾಮನಗರ ಜಿಲ್ಲೆಗಳಿಗೆ ಸೀಮಿತವಾಗಿರತಕ್ಕದ್ದು.	03.01 – ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಗೆ ಒಳಪಟ್ಟ ಪ್ರದೇಶಗಳು (ಗ್ರೇಟರ್ ಬೆಂಗಳೂರು ಪ್ರದೇಶ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸರಹದ್ದು, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಬೆಂಗಳೂರು ದಕ್ಷಿಣ (ರಾಮನಗರ), ತುಮಕೂರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತವಾಗಿರ ತಕ್ಕದ್ದು.	ಬ್ಯಾಂಕಿನ ಕಾರ್ಯ ಕ್ಷೇತ್ರದ ವ್ಯಾಪ್ತಿ ಹೆಚ್ಚಿಸಿ ಕೊಳ್ಳಲು

2024ನೇ ಸಾಲಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ

2024ನೇ ಸಾಲಿನ ಪ್ರತಿಭಾ ಪುರಸ್ಕಾರ
ಹಾಗೂ ಕನ್ನಡ ರಾಜ್ಯೋತ್ಸವ
ಕಾರ್ಯಕ್ರಮದ ಉದ್ಘಾಟನೆ
ಶ್ರೀ ಹಂಪಿ ಹೇಮಕೂಟ –
ಶ್ರೀ ಗಾಯತ್ರಿ ಪೀಠಾಧ್ಯಕ್ಷರಾದ
ಶ್ರೀ ಶ್ರೀ ಶ್ರೀ ದಯಾನಂದಪುರಿ
ಮಹಾಸ್ವಾಮಿಗಳವರಿಂದ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ
ಗಣ್ಯರಿಂದ ಪುರಸ್ಕೃತಗೊಂಡ
ವಿದ್ಯಾರ್ಥಿಗಳು

ಆಡಳಿತ ಕಛೇರಿ ಹಾಗೂ ಮುಖ್ಯ ಶಾಖೆ ಸ್ಥಳಾಂತರ – ಪೂಜಾ ಕಾರ್ಯಕ್ರಮ

ಆಡಳಿತ ಕಛೇರಿ ಸ್ಥಳಾಂತರ
ಸಂದರ್ಭದಲ್ಲಿ ನಡೆದ
ಪೂಜಾ ಕಾರ್ಯಕ್ರಮ

ಮುಖ್ಯ ಶಾಖೆಯ ಸ್ಥಳಾಂತರ
ಸಂದರ್ಭದಲ್ಲಿ ನಡೆದ
ಪೂಜಾ ಕಾರ್ಯಕ್ರಮ

ಆಡಳಿತ ಕಚೇರಿ :

ನಂ. 16, 1ನೇ 'ಎ' ಮುಖ್ಯರಸ್ತೆ, ಸುಧಾಮನಗರ, ಬೆಂಗಳೂರು – 560 027. ಫೋನ್ : 4852 1054

ಶಾಖೆಗಳು :

ಮುಖ್ಯ ಶಾಖೆ	: ನಂ.47, ಶ್ರೀ ದೇವರ ದಾಸಿಮಯ್ಯ ರಸ್ತೆ (ಜೆ.ಎಂ.ರಸ್ತೆ), ಬೆಂಗಳೂರು – 560 002. ಫೋನ್: 96069 23070
ಸುಧಾಮನಗರ	: ನಂ.16, ಮೊದಲನೇ ಮಹಡಿ, 1ನೇ 'ಎ' ಮುಖ್ಯರಸ್ತೆ, ಸುಧಾಮನಗರ, ಬೆಂಗಳೂರು – 560 027. ಫೋನ್: 4124 1207 / 96069 23071
ಆಡುಗೋಡಿ	: ನಂ.11, 3ನೇ ಅಡ್ಡರಸ್ತೆ, ಗ್ರಾಮ ದೇವತಾ ಬೀದಿ, ಆಡುಗೋಡಿ, ಬೆಂಗಳೂರು–560030. ಫೋನ್: 25703133 / 96069 23074
ಮಾಗಡಿ ರಸ್ತೆ	: ನಂ.38/1, 7ನೇ ಅಡ್ಡರಸ್ತೆ, (ಅಂಜನ್ ಟಾಕೀಸ್ ಹತ್ತಿರ), ಮಾಗಡಿ ಮುಖ್ಯರಸ್ತೆ, ಬೆಂಗಳೂರು – 560 023. ಫೋನ್: 23389481 / 96069 23079
ಲಕ್ಷ್ಮೀನಾರಾಯಣಪುರ	: ನಂ.14/4, 10ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಬೆಂಗಳೂರು–560021. ಫೋನ್: 23325357 / 96069 23080
ಗೊಟ್ಟಿಗೆರೆ	: ನಂ.1562/1575/825, 2ನೇ ಅಡ್ಡರಸ್ತೆ, ವೀವರ್ಸ್ ಕಾಲೋನಿ, ಗೊಟ್ಟಿಗೆರೆ ಪೋಸ್ಟ್, ಬೆಂಗಳೂರು – 560 083. ಫೋನ್: 28429403 / 96069 23073
ಆನೇಕಲ್	: ನಂ.67/147, ಭಜನೆಮನೆಬೀದಿ, ಆನೇಕಲ್–562 106. ಫೋನ್: 27830603 / 96069 23072
ನೆಲಮಂಗಲ	: ಖಾತ ನಂ.3921/2661/12, 3584/2661/1, ವೀವರ್ಸ್ ಕಾಲೋನಿ, ನೆಲಮಂಗಲ ಟೌನ್, ಬೆಂಗಳೂರು – 562 123. ಫೋನ್: 27722993/ 96069 23075
ಉತ್ತರಹಳ್ಳಿ	: ನಂ.56/4, 8/2, ಆಂಜನೇಯ ಸ್ವಾಮಿ ದೇವಸ್ಥಾನ ಹತ್ತಿರ, ಸುಬ್ರಮಣ್ಯಪುರ ಪೋಸ್ಟ್, ಉತ್ತರಹಳ್ಳಿ, ಬೆಂಗಳೂರು – 560061. ಫೋನ್: 26394039 / 96069 23076
ಯಲಹಂಕ	: ಸೈಟ್ ನಂ, 1 ಮತ್ತು 2, ಹಳೇ ಖಾತಾ ನಂ. 109, ಬೆಳ್ಳಹಳ್ಳಿ ಮುಖ್ಯ ರಸ್ತೆ, ಕೋಗಿಲು ಬಡಾವಣೆ, ಯಲಹಂಕ, ಬೆಂಗಳೂರು – 560 064. ಫೋನ್: 96069 23077

BOOK-POST

To,
Smt./Sri

If undelivered please return to :

TEXTILE CO-OPERATIVE BANK LTD.

A.O. : No. 16, 1st 'A' Main, Sudhamanagar, Bengaluru - 560 027.
Phone : 080-4852 1054

Ptd. @ Cauvery Ent. : 98440 81382